# ಆಡಳಿತ ನ್ಯಾಯಾಧಿಕರಣ ಅಧಿನಿಯಮ, 1985

5.5.2007 ರ ಭಾರತ ವಿಶೇಷ ರಾಜಪತ್ರದ IXನೇ ಭಾಗದ 1ನೇ ವಿಭಾಗದ 37ನೇ ಸಂಪುಟದ 1ನೇ ಸಂಚಿಕೆಯಲ್ಲಿ 159 ರಿಂದ 179ರ ವರೆಗಿನ ಪುಟಗಳಲ್ಲಿ ಪ್ರಕಟವಾಗಿದೆ

## ವಿಷಯಾನುಕ್ರಮಣಿಕೆ

**ಪ್ರಕರಣಗಳು:**


### ಅಧ್ಯಾಯ - I
### ಪ್ರಾರಂಭಿಕ

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಅಧಿನಿಯಮವು ಕೆಲವು ವ್ಯಕ್ತಿಗಳಿಗೆ ಅನ್ವಯವಾಗದಿರುವುದು
3. ಪರಿಭಾಷೆಗಳು

### ಅಧ್ಯಾಯ - II
### ನ್ಯಾಯಾಧಿಕರಣಗಳ ಮತ್ತು ಅವುಗಳ ನ್ಯಾಯಪೀಠಗಳ ಸ್ಥಾಪನೆ

4. ಆಡಳಿತ ನ್ಯಾಯಾಧಿಕರಣಗಳ ಸ್ಥಾಪನೆ
5. ನ್ಯಾಯಾಧಿಕರಣಗಳ ಮತ್ತು ಅವುಗಳ ನ್ಯಾಯಪೀಠಗಳ ರಚನೆ
6. ಅಧ್ಯಕ್ಷನಾಗಿ, ಉಪಾಧ್ಯಕ್ಷನಾಗಿ ಅಥವಾ ಇತರ ಸದಸ್ಯನಾಗಿ ನೇಮಕಗೊಳ್ಳಲು ಅಗತ್ಯವಾದ ಅರ್ಹತೆಗಳು
7. ಉಪಾಧ್ಯಕ್ಷನು ಕೆಲವು ಸಂದರ್ಭಗಳಲ್ಲಿ ಅಧ್ಯಕ್ಷನಾಗಿ ಕಾರ್ಯನಿರ್ವಹಿಸುವುದು ಅಥವಾ ಅವನ ಪ್ರಕಾರ್ಯಗಳನ್ನು ನೆರವೇರಿಸುವುದು
8. ಪದಾವಧಿ
9. ಪದಾಧಿಕಾರಿಗಳು ರಾಜೀನಾಮೆ ನೀಡುವುದು ಮತ್ತು ಅವರನ್ನು ತೆಗೆದುಹಾಕುವುದು
10. ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಇತರ ಸದಸ್ಯರ ಸಂಬಳಗಳು ಮತ್ತು ಭತ್ಯೆಗಳು ಮತ್ತು ಇತರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು
11. ಅಧ್ಯಕ್ಷ ಮುಂತಾದವರು ಪದಧಾರಣ ಮಾಡಿರುವುದು ನಿಂತುಹೋದ ಮೇಲೆ ಅಧ್ಯಕ್ಷನು ಮುಂತಾದವರು ಪದಧಾರಣ ಮಾಡುವ ಬಗ್ಗೆ ಉಪಬಂಧ
12. ಅಧ್ಯಕ್ಷನ ಆರ್ಥಿಕ ಮತ್ತು ಆಡಳಿತದ ಅಧಿಕಾರಗಳು
13. ನ್ಯಾಯಾಧಿಕರಣದ ಸಿಬ್ಬಂದಿ

### ಅಧ್ಯಾಯ - III
### ನ್ಯಾಯಾಧಿಕರಣಗಳ ಅಧಿಕಾರ ವ್ಯಾಪ್ತಿ, ಅಧಿಕಾರಗಳು ಮತ್ತು ಪ್ರಾಧಿಕಾರ

14. ಕೇಂದ್ರ ಆಡಳಿತ ನ್ಯಾಯಾಧಿಕರಣದ ಅಧಿಕಾರ ವ್ಯಾಪ್ತಿ, ಅಧಿಕಾರಗಳು ಮತ್ತು ಪ್ರಾಧಿಕಾರ
15. ರಾಜ್ಯ ಆಡಳಿತ ನ್ಯಾಯಾಧಿಕರಣದ ಅಧಿಕಾರ ವ್ಯಾಪ್ತಿ, ಅಧಿಕಾರ ಮತ್ತು ಪ್ರಾಧಿಕಾರ
16. ಜಂಟಿ ಆಡಳಿತ ನ್ಯಾಯಾಧಿಕರಣದ ಅಧಿಕಾರ ವ್ಯಾಪ್ತಿ, ಅಧಿಕಾರಗಳು ಮತ್ತು ಪ್ರಾಧಿಕಾರ
17. ನ್ಯಾಯಾಧಿಕರಣದ ನಿಂದನೆಗಾಗಿ ದಂಡಿಸುವ ಅಧಿಕಾರ

18. ನ್ಯಾಯಪೀಠಗಳಿಗೆ ವ್ಯವಹಾರದ ಹಂಚಿಕೆ

## ಅಧ್ಯಾಯ – IV

### ಪ್ರಕ್ರಿಯೆ

19. ನ್ಯಾಯಾಧಿಕರಣಗಳಿಗೆ ಅರ್ಜಿ ಸಲ್ಲಿಸುವುದು

20. ಇತರ ಪರಿಹಾರೋಪಾಯಗಳನ್ನು ಬಳಸಿ ಮುಗಿಸಿದ್ದ ಹೊರತು ಅರ್ಜಿಗಳನ್ನು ಅಂಗೀಕರಿಸದಿರುವುದು

21. ಕಾಲ ಪರಿಮಿತಿ

22. ನ್ಯಾಯಾಧಿಕರಣದ ಕಾರ್ಯವಿಧಾನ ಮತ್ತು ಅಧಿಕಾರಗಳು

23. ಕಾನೂನು ವೃತ್ತಿ ಸಲಹೆಗಾರರ ನೆರವು ಪಡೆಯಲು ಅರ್ಜಿದಾರನ ಹಕ್ಕು ಮತ್ತು ಪ್ರಸ್ತುತಪಡಿಸುವ ಅಧಿಕಾರಿಗಳನ್ನು ನೇಮಕ ಮಾಡಲು ಸರ್ಕಾರ ಮುಂತಾದವುಗಳ ಹಕ್ಕು

24. ಮಧ್ಯಕಾಲೀನ ಆದೇಶಗಳನ್ನು ಮಾಡುವ ಸಂಬಂಧದಲ್ಲಿ ಷರತ್ತುಗಳು

25. ಒಂದು ನ್ಯಾಯಪೀಠದಿಂದ ಇನ್ನೊಂದು ನ್ಯಾಯಪೀಠಕ್ಕೆ ಪ್ರಕರಣಗಳನ್ನು ವರ್ಗಾಯಿಸಲು ಅಧ್ಯಕ್ಷನ ಅಧಿಕಾರ

26. ಬಹುಮತದ ಮೂಲಕ ತೀರ್ಮಾನ ಕೈಗೊಳ್ಳುವುದು

27. ನ್ಯಾಯಾಧಿಕರಣದ ಆದೇಶಗಳ ಅಮಲ್ಜಾರಿ

## ಅಧ್ಯಾಯ – V

### ಸಂಕೀರ್ಣ

28. ಸರ್ವೋಚ್ಚ ನ್ಯಾಯಾಲಯವನ್ನು ಉಳಿದು ಇತರ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಯನ್ನು ಹೊರತುಪಡಿಸುವುದು

29. ಇತ್ಯರ್ಥದಲ್ಲಿರುವ ಪ್ರಕರಣಗಳ ವರ್ಗಾವಣೆ

29ಎ. ಕೆಲವು ಅಪೀಲುಗಳನ್ನು ದಾಖಲ್ಮಾಡಲು ಉಪಬಂಧ

30. ನ್ಯಾಯಾಧಿಕರಣದ ಮುಂದೆ ಇರುವ ವ್ಯವಹರಣೆಗಳು ನ್ಯಾಯಿಕ ವ್ಯವಹರಣೆಗಳಾಗಿರುವುದು

31. ನ್ಯಾಯಾಧಿಕರಣದ ಸದಸ್ಯರು ಮತ್ತು ಸಿಬ್ಬಂದಿ ವರ್ಗವು ಲೋಕನೌಕರರಾಗಿರುವುದು

32. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ

33. ಈ ಅಧಿನಿಯಮವು ಅಧ್ಯಾರೋಹಿ ಪರಿಣಾಮ ಹೊಂದಿರುವುದು

34. ತೊಂದರೆಗಳನ್ನು ನಿವಾರಿಸುವ ಅಧಿಕಾರ

35. ನಿಯಮಗಳನ್ನು ರಚಿಸಲು ಕೇಂದ್ರ ಸರ್ಕಾರದ ಅಧಿಕಾರ

36. ನಿಯಮಗಳನ್ನು ರಚಿಸಲು ಸಮುಚಿತ ಸರ್ಕಾರದ ಅಧಿಕಾರ

36ಎ. ಪೂರ್ವಾನ್ವಯವಾಗಿ ನಿಯಮಗಳನ್ನು ರಚಿಸಲು ಅಧಿಕಾರ

37. ನಿಯಮಗಳನ್ನು ಸದನದ ಮುಂದೆ ಇರಿಸುವುದು

# ಆಡಳಿತ ನ್ಯಾಯಾಧಿಕರಣ ಅಧಿನಿಯಮ, 1985

(1985ರ ಅಧಿನಿಯಮ ಸಂಖ್ಯೆ 13)

[27ನೇ ಫೆಬ್ರವರಿ, 1985]

ಭಾರತ ಒಕ್ಕೂಟದ ಅಥವಾ ಯಾವುದೇ ರಾಜ್ಯದ ಅಥವಾ ಭಾರತ ರಾಜ್ಯಕ್ಷೇತ್ರದೊಳಗಿರುವ ಅಥವಾ ಭಾರತ ಸರ್ಕಾರದ ನಿಯಂತ್ರಣದಲ್ಲಿರುವ ಯಾವುದೇ ಸ್ಥಳೀಯ ಅಥವಾ ಇತರ ಪ್ರಾಧಿಕಾರದ ಅಥವಾ ಸಂವಿಧಾನದ 323ಎ ಅನುಚ್ಛೇದದ ಅನುಸಾರ ಸರ್ಕಾರದ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಯಾವುದೇ ನಿಗಮದ ಅಥವಾ ಸೊಸೈಟಿಯ ವ್ಯವಹಾರಗಳಿಗೆ ಸಂಬಂಧಪಟ್ಟಂತೆ ಲೋಕ ಸೇವೆಗಳಿಗೆ ಮತ್ತು ಹುದ್ದೆಗಳಿಗೆ ನೇಮಕಗೊಂಡ ವ್ಯಕ್ತಿಗಳ ನೌಕರಿ ಭರ್ತಿ ಮತ್ತು ಸೇವಾ ಷರತ್ತುಗಳಿಗೆ ಸಂಬಂಧಪಟ್ಟ ವಿವಾದಗಳನ್ನು ಮತ್ತು ದೂರುಗಳನ್ನು ಆಡಳಿತ ನ್ಯಾಯಾಧಿಕರಣಗಳ ಮೂಲಕ ನ್ಯಾಯ ನಿರ್ಣಯ ಮಾಡುವ ಬಗ್ಗೆ ಅಥವಾ ಅಧಿವಿಚಾರಣೆ ಮಾಡುವ ಬಗ್ಗೆ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಪ್ರಾಸಂಗಿಕವಾದ ವಿಷಯಗಳ ಬಗ್ಗೆ ಉಪಬಂಧ ಕಲ್ಪಿಸುವ ಅಧಿನಿಯಮ.

ಈ ಅಧಿನಿಯಮವು, ಭಾರತ ಗಣರಾಜ್ಯದ ಮೂವತ್ತಾರನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

## ಅಧ್ಯಾಯ - I

## ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಆಡಳಿತ ನ್ಯಾಯಾಧಿಕರಣ ಅಧಿನಿಯಮ, 1985 ಎಂದು ಕರೆಯತಕ್ಕದ್ದು.

(2) ಈ ಅಧಿನಿಯಮವು,-

(ಎ) ಕೇಂದ್ರ ಆಡಳಿತ ನ್ಯಾಯಾಧಿಕರಣಕ್ಕೆ ಸಂಬಂಧಪಡುವಷ್ಟರಮಟ್ಟಿಗೆ, ಇಡೀ ಭಾರತಕ್ಕೆ;

(ಬಿ) ರಾಜ್ಯಗಳ ನ್ಯಾಯಾಧಿಕರಣಗಳಿಗೆ ಸಂಬಂಧಪಡುವಷ್ಟರಮಟ್ಟಿಗೆ, ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ, ಇಡೀ ಭಾರತಕ್ಕೆ

- ಅನ್ವಯವಾಗತಕ್ಕದ್ದು.

(3) ಈ ಅಧಿನಿಯಮದ ಉಪಬಂಧಗಳು ಕೇಂದ್ರ ಆಡಳಿತ ನ್ಯಾಯಾಧಿಕರಣಕ್ಕೆ ಸಂಬಂಧಪಡುವಷ್ಟರಮಟ್ಟಿಗೆ, ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

(4) ಈ ಅಧಿನಿಯಮದ ಉಪಬಂಧಗಳು ಯಾವುದೇ ರಾಜ್ಯದ ಆಡಳಿತ ನ್ಯಾಯಾಧಿಕರಣಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ, ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಆ ರಾಜ್ಯದಲ್ಲಿ ಜಾರಿಗೆ ಬರತಕ್ಕದ್ದು.

**2. ಅಧಿನಿಯಮವು ಕೆಲ ವ್ಯಕ್ತಿಗಳಿಗೆ ಅನ್ವಯವಾಗದಿರುವುದು.-** ಈ ಅಧಿನಿಯಮದ ಉಪಬಂಧಗಳು ಈ ಮುಂದಿನವರಿಗೆ, ಎಂದರೆ,-

(ಎ) ಒಕ್ಕೂಟದ ನೌಕಾಪಡೆಯ, ಮಿಲಿಟರಿಯ ಅಥವಾ ವಾಯುಪಡೆಯ ಅಥವಾ ಯಾವುದೇ ಇತರ ಸಶಸ್ತ್ರ ಪಡೆಗಳ ಯಾರೇ ಸದಸ್ಯನಿಗೆ;

(ಬಿ) [XXX]

(ಸಿ) ಸರ್ವೋಚ್ಚ ನ್ಯಾಯಾಲಯದ ಅಥವಾ ಯಾವುದೇ ಉಚ್ಚ ನ್ಯಾಯಾಲಯದ ಅಥವಾ ಅವುಗಳಿಗೆ ಅಧೀನವಾದ ನ್ಯಾಯಾಲಯಗಳ ಯಾರೇ ಅಧಿಕಾರಿಗೆ ಅಥವಾ ನೌಕರನಿಗೆ;

(ಡಿ) ಸಂಸತ್ತಿನ ಉಭಯ ಸದನಗಳ ಪೈಕಿ ಯಾವುದೇ ಸದನದ ಸಚಿವಾಲಯ ಸಿಬ್ಬಂದಿ ವರ್ಗಕ್ಕೆ ಅಥವಾ ಯಾವುದೇ ರಾಜ್ಯ ವಿಧಾನ ಮಂಡಲದ ಅಥವಾ ಅದರ ಯಾವುದೇ ಸದನದ ಅಥವಾ ವಿಧಾನ ಮಂಡಲವನ್ನು ಹೊಂದಿರುವ ಒಕ್ಕೂಟ ರಾಜ್ಯಕ್ಷೇತ್ರದ ಸಂದರ್ಭದಲ್ಲಿ ಆ ವಿಧಾನಮಂಡಲದ ಸಚಿವಾಲಯ ಸಿಬ್ಬಂದಿ ವರ್ಗಕ್ಕೆ ನೇಮಕಗೊಂಡ ಯಾರೇ ವ್ಯಕ್ತಿಗೆ

– ಅನ್ವಯವಾಗತಕ್ಕದ್ದಲ್ಲ.

3. **ಪರಿಭಾಷೆಗಳು.**– ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಆಡಳಿತ ಸದಸ್ಯ" ಎಂದರೆ (ಐ) ಖಂಡದ ಅರ್ಥವ್ಯಾಪ್ತಿಯೊಳಗೆ ನ್ಯಾಯಿಕ ಸದಸ್ಯನಾಗಿಲ್ಲದ ನ್ಯಾಯಾಧಿಕರಣದ ಒಬ್ಬ ಸದಸ್ಯ;

(ಎಎ) ಒಂದು ರಾಜ್ಯಕ್ಕೆ ಸಂಬಂಧಿಸಿದಂತೆ "ಆಡಳಿತ ನ್ಯಾಯಾಧಿಕರಣ" ಎಂದರೆ ಆ ರಾಜ್ಯದ ಆಡಳಿತ ನ್ಯಾಯಾಧಿಕರಣ ಅಥವಾ ಸಂದರ್ಭಾನುಸಾರ, ಆ ರಾಜ್ಯದ ಮತ್ತು ಯಾವುದೇ ಇತರ ರಾಜ್ಯದ ಅಥವಾ ರಾಜ್ಯಗಳ ಜಂಟಿ ಆಡಳಿತ ನ್ಯಾಯಾಧಿಕರಣ;

(ಬಿ) "ಅರ್ಜಿ" ಎಂದರೆ 19ನೇ ಪ್ರಕರಣದ ಅಡಿಯಲ್ಲಿ ಸಲ್ಲಿಸಿದ ಅರ್ಜಿ;

(ಸಿ) ಒಂದು ನ್ಯಾಯಾಧಿಕರಣಕ್ಕೆ ಸಂಬಂಧಿಸಿದಂತೆ "ಗೊತ್ತುಪಡಿಸಲಾದ ದಿನ" ಎಂದರೆ, 4ನೇ ಪ್ರಕರಣದ ಅಡಿಯಲ್ಲಿ, ಅಧಿಸೂಚನೆಯ ಮೂಲಕ ಯಾವ ದಿನಾಂಕದಿಂದ ಜಾರಿಯಾಗುವಂತೆ ಆ ನ್ಯಾಯಾಧಿಕರಣವನ್ನು ಸ್ಥಾಪಿಸಲಾಗುವುದೋ ಆ ದಿನಾಂಕ;

(ಡಿ) "ಸಮುಚಿತ ಸರ್ಕಾರ" ಎಂದರೆ,–

(i) ಕೇಂದ್ರ ಆಡಳಿತ ನ್ಯಾಯಾಧಿಕರಣಕ್ಕೆ ಅಥವಾ ಜಂಟಿ ಆಡಳಿತ ನ್ಯಾಯಾಧಿಕರಣಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ;

(ii) ಒಂದು ರಾಜ್ಯ ಆಡಳಿತ ನ್ಯಾಯಾಧಿಕರಣಕ್ಕೆ ಸಂಬಂಧಿಸಿದಂತೆ, ಆ ರಾಜ್ಯ ಸರ್ಕಾರ;

(ಇ) "ನ್ಯಾಯಪೀಠ" ಎಂದರೆ ನ್ಯಾಯಾಧಿಕರಣದ ನ್ಯಾಯಪೀಠ;

(ಎಫ್) "ಕೇಂದ್ರ ಆಡಳಿತ ನ್ಯಾಯಾಧಿಕರಣ" ಎಂದರೆ 4ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ಸ್ಥಾಪಿಸಲಾದ ಆಡಳಿತ ನ್ಯಾಯಾಧಿಕರಣ;

(ಜಿ) "ಅಧ್ಯಕ್ಷ" ಎಂದರೆ ನ್ಯಾಯಾಧಿಕರಣದ ಅಧ್ಯಕ್ಷ;

(ಎಚ್) "ಜಂಟಿ ಆಡಳಿತ ನ್ಯಾಯಾಧಿಕರಣ" ಎಂದರೆ 4ನೇ ಪ್ರಕರಣದ (3)ನೇ ಉಪಪ್ರಕರಣದ ಅಡಿಯಲ್ಲಿ ಎರಡು ಅಥವಾ ಹೆಚ್ಚು ರಾಜ್ಯಗಳಿಗಾಗಿ ಸ್ಥಾಪಿಸಲಾದ ಆಡಳಿತ ನ್ಯಾಯಾಧಿಕರಣ;

(ಐ) "ನ್ಯಾಯಿಕ ಸದಸ್ಯ" ಎಂದರೆ ಈ ಅಧಿನಿಯಮದ ಅಡಿಯಲ್ಲಿ ನ್ಯಾಯಿಕ ಸದಸ್ಯನೆಂದು ನೇಮಕಗೊಂಡ ನ್ಯಾಯಾಧಿಕರಣದ ಸದಸ್ಯ ಮತ್ತು ನ್ಯಾಯಿಕ ಸದಸ್ಯ ಎಂಬುದರಲ್ಲಿ 6ನೇ ಪ್ರಕರಣದ (3)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಯಾವುದೇ ಅರ್ಹತೆಗಳನ್ನು ಹೊಂದಿರುವ ಅಧ್ಯಕ್ಷ ಅಥವಾ ಉಪಾಧ್ಯಕ್ಷ ಸಹಾ ಒಳಗೊಳ್ಳುತ್ತಾನೆ;

(ಐಎ) "ಸದಸ್ಯ" ಎಂದರೆ (ನ್ಯಾಯಿಕ ಸದಸ್ಯನಾಗಿರಲಿ ಅಥವಾ ಆಡಳಿತ ಸದಸ್ಯನಾಗಿರಲಿ) ನ್ಯಾಯಾಧಿಕರಣದ ಸದಸ್ಯ ಮತ್ತು ಸದಸ್ಯ ಎಂಬುದು ಅಧ್ಯಕ್ಷನನ್ನು ಮತ್ತು ಒಬ್ಬ ಉಪಾಧ್ಯಕ್ಷನನ್ನು ಒಳಗೊಳ್ಳುತ್ತದೆ;

(ಜೆ) "ಅಧಿಸೂಚನೆ" ಎಂದರೆ ರಾಜಪತ್ರದಲ್ಲಿ ಪ್ರಕಟಿಸಲಾದ ಅಧಿಸೂಚನೆ;

(ಕೆ) "ಹುದ್ದೆ" ಎಂದರೆ ಭಾರತದೊಳಗಿನ ಅಥವಾ ಹೊರಗಿನ ಹುದ್ದೆ;

(ಎಲ್) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಎಂ) "ರಾಷ್ಟ್ರಪತಿ" ಎಂದರೆ ಭಾರತದ ರಾಷ್ಟ್ರಪತಿ;

(ಎನ್) [XXX]

(ಓ) “ನಿಯಮಗಳು” ಎಂದರೆ ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ನಿಯಮಗಳು;

(ಪಿ) “ಸೇವೆ” ಎಂದರೆ ಭಾರತದೊಳಗಿನ ಅಥವಾ ಹೊರಗಿನ ಸೇವೆ;

(ಕ್ಯೂ) ಯಾರೇ ವ್ಯಕ್ತಿಗೆ ಸಂಬಂಧಿಸಿದಂತೆ “ಸೇವಾ ವಿಷಯಗಳು” ಎಂದರೆ,-

(i) (ಭತ್ಯೆಗಳೂ ಸೇರಿ) ಪರಿಶ್ರಮಧನ, ನಿವೃತ್ತಿ ವೇತನ ಮತ್ತು ಇತರ ನಿವೃತ್ತಿ ಸೌಲಭ್ಯಗಳು;

(ii) ಸೇವಾ ಸ್ಥಿರೀಕರಣ, ಜ್ಯೇಷ್ಠತೆ, ಬಡತಿ, ಹಿಂಬಡತಿ, ಅವಧಿಪೂರ್ವ ನಿವೃತ್ತಿ ಮತ್ತು ವಯೋನಿವೃತ್ತಿ - ಇವುಗಳು ಸೇರಿದಂತೆ ಸೇವಾವಧಿ;

(iii) ಯಾವುದೇ ಬಗೆಯ ರಜೆ;

(iv) ಶಿಸ್ತಿನ ವಿಷಯಗಳು; ಅಥವಾ

(v) ಯಾವುದಾದರೂ ಇತರ ವಿಷಯಗಳು

- ಇವುಗಳಿಗೆ ಸಂಬಂಧಿಸಿದಂತೆ ಒಕ್ಕೂಟದ ಅಥವಾ ಯಾವುದೇ ರಾಜ್ಯದ ಅಥವಾ ಭಾರತ ರಾಜ್ಯಕ್ಷೇತ್ರದೊಳಗಿರುವ ಅಥವಾ ಭಾರತ ಸರ್ಕಾರದ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಯಾವುದೇ ಸ್ಥಳೀಯ ಅಥವಾ ಇತರ ಪ್ರಾಧಿಕಾರದ ಅಥವಾ ಸಂದರ್ಭಾನುಸಾರ, ಸರ್ಕಾರದ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಯಾವುದೇ ನಿಗಮದ ಅಥವಾ ಸೊಸೈಟಿಯ ವ್ಯವಹಾರಗಳ ಬಗ್ಗೆ ಅವನ ಸೇವಾ ಷರತ್ತುಗಳಿಗೆ ಸಂಬಂಧಿಸಿದ ಎಲ್ಲ ವಿಷಯಗಳು;

(ಆರ್) ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ, “ಕುಂದುಕೊರತೆ ನಿವಾರಣಾ ಸೇವಾ ನಿಯಮಗಳು” ಎಂದರೆ ಈ ಅಧಿನಿಯಮದ ಮೇರೆಗೆ ಹೊರತಾಗಿ ಅನ್ಯಥಾ ಅಂತಹ ವಿಷಯಗಳಿಗೆ ಸಂಬಂಧಿಸಿದಂತೆ ಕುಂದುಕೊರತೆಗಳ ನಿವಾರಣೆಗೆ ಸಂಬಂಧಪಟ್ಟಂತೆ ತತ್ಕಾಲದಲ್ಲಿ ಜಾರಿಯಲ್ಲಿರುವ ನಿಯಮಗಳು, ವಿನಿಯಮಗಳು, ಆದೇಶಗಳು ಅಥವಾ ಇತರ ಲಿಖಿತಗಳು ಅಥವಾ ಏರ್ಪಾಟುಗಳು;

(ಆರ್‌ಆರ್) “ಸೊಸೈಟಿ” ಎಂದರೆ ಸೊಸೈಟಿಗಳ ನೋಂದಣಿ ಅಧಿನಿಯಮ, 1860 (1860ರ 21)ರ ಮೇರೆಗೆ ಅಥವಾ ಒಂ ದು ರಾಜ್ಯದಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ ಸಂವಾದಿಯಾದ ಯಾವುದೇ ಇತರ ಕಾನೂನಿನ ಮೇರೆಗೆ ನೋಂದಾಯಿತವಾಗಿರುವ ಒಂದು ಸೊಸೈಟಿ;

(ಎಸ್) “ಸರ್ವೋಚ್ಚ ನ್ಯಾಯಾಲಯ” ಎಂದರೆ ಭಾರತದ ಸರ್ವೋಚ್ಚ ನ್ಯಾಯಾಲಯ;

(ಟಿ) “ನ್ಯಾಯಾಧಿಕರಣ” ಎಂದರೆ ಕೇಂದ್ರ ಆಡಳಿತ ನ್ಯಾಯಾಧಿಕರಣ ಅಥವಾ ರಾಜ್ಯ ಆಡಳಿತ ನ್ಯಾಯಾಧಿಕರಣ ಅಥವಾ ಜಂಟಿ ಆಡಳಿತ ನ್ಯಾಯಾಧಿಕರಣ;

(ಯು) “ಉಪಾಧ್ಯಕ್ಷ” ಎಂದರೆ ನ್ಯಾಯಾಧಿಕರಣದ ಉಪಾಧ್ಯಕ್ಷ.

**ವಿವರಣೆ.-** ಇಬ್ಬರು ಅಥವಾ ಹೆಚ್ಚು ಜನ ಉಪಾಧ್ಯಕ್ಷರಿರುವ ನ್ಯಾಯಾಧಿಕರಣದ ಸಂದರ್ಭದಲ್ಲಿ, ಈ ಅಧಿನಿಯಮದಲ್ಲಿ ಉಪಾಧ್ಯಕ್ಷನ ಬಗ್ಗೆ ಮಾಡಲಾಗಿರುವ ಉಲ್ಲೇಖಗಳನ್ನು ಆ ಪ್ರತಿಯೊಬ್ಬ ಉಪಾಧ್ಯಕ್ಷನ ಬಗ್ಗೆ ಮಾಡಲಾಗಿರುವ ಉಲ್ಲೇಖವೆಂಬುದಾಗಿ ಅರ್ಥೈಸತಕ್ಕದ್ದು.

## ಅಧ್ಯಾಯ - II

## ನ್ಯಾಯಾಧಿಕರಣಗಳ ಮತ್ತು ಅವುಗಳ ನ್ಯಾಯಪೀಠಗಳ ಸ್ಥಾಪನೆ

**4. ಆಡಳಿತ ನ್ಯಾಯಾಧಿಕರಣಗಳ ಸ್ಥಾಪನೆ.-** (1) ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ಕೇಂದ್ರ ಆಡಳಿತ ನ್ಯಾಯಾಧಿಕರಣಕ್ಕೆ ಪ್ರದಾನ ಮಾಡಿದ ಅಧಿಕಾರ ವ್ಯಾಪ್ತಿಯನ್ನು, ಅಧಿಕಾರಗಳನ್ನು ಮತ್ತು ಪ್ರಾಧಿಕಾರವನ್ನು ಚಲಾಯಿಸಲು ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ ಕೇಂದ್ರ ಆಡಳಿತ ನ್ಯಾಯಾಧಿಕರಣವೆಂದು ಕರೆಯಲಾಗುವ ಒಂದು ಆಡಳಿತ ನ್ಯಾಯಾಧಿಕರಣವನ್ನು ಸ್ಥಾಪಿಸತಕ್ಕದ್ದು.

(2) ಯಾವುದೇ ರಾಜ್ಯ ಸರ್ಕಾರದಿಂದ ಈ ಸಂಬಂಧದಲ್ಲಿ ಕೋರಿಕೆಯನ್ನು ಸ್ವೀಕರಿಸಿದ ಮೇಲೆ, ಕೇಂದ್ರ ಸರ್ಕಾರವು ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ರಾಜ್ಯ ಆಡಳಿತ ನ್ಯಾಯಾಧಿಕರಣಕ್ಕೆ ಪ್ರದಾನ ಮಾಡಿದ ಅಧಿಕಾರ ವ್ಯಾಪ್ತಿಯನ್ನು, ಅಧಿಕಾರಗಳನ್ನು ಮತ್ತು ಪ್ರಾಧಿಕಾರವನ್ನು ಚಲಾಯಿಸಲು ............. (ರಾಜ್ಯದ ಹೆಸರು) ಆಡಳಿತ ನ್ಯಾಯಾಧಿಕರಣವೆಂದು ಕರೆಯಲಾಗುವ ರಾಜ್ಯ ಆಡಳಿತ ನ್ಯಾಯಾಧಿಕರಣವನ್ನು ಅಧಿಸೂಚನೆಯ ಮೂಲಕ ಸ್ಥಾಪಿಸಬಹುದು.

(3) (2)ನೇ ಉಪಪ್ರಕರಣದಲ್ಲಿ ಏನೇ ಇದ್ದರೂ ಎರಡು ಅಥವಾ ಹೆಚ್ಚು ರಾಜ್ಯಗಳು ಮತ್ತು ಅವುಗಳಲ್ಲಿ ಯಾವುದೇ ರಾಜ್ಯವು ಅಥವಾ ಆ ಎಲ್ಲ ರಾಜ್ಯಗಳು ಆ ಉಪಪ್ರಕರಣದ ಅಡಿಯಲ್ಲಿ ಸ್ಥಾಪಿತವಾದ ನ್ಯಾಯಾಧಿಕರಣವನ್ನು ಅಥವಾ ನ್ಯಾಯಾಧಿಕರಣಗಳನ್ನು ಹೊಂದಿದ್ದಾಗ್ಯೂ, ಆ ರಾಜ್ಯಗಳು ಒಪ್ಪಂದವನ್ನು ಮಾಡಿಕೊಂಡು ಆ ಒಪ್ಪಂದದಲ್ಲಿ ಭಾಗವಹಿಸುವ ಪ್ರತಿಯೊಂದು ರಾಜ್ಯಕ್ಕೆ ಒಂದೇ ಆಡಳಿತ ನ್ಯಾಯಾಧಿಕರಣವು ಇರತಕ್ಕದ್ದೆಂದು ಒಪ್ಪಿಕೊಳ್ಳಬಹುದು ಮತ್ತು ಆ ಒಪ್ಪಂದವು ಕೇಂದ್ರ ಸರ್ಕಾರದಿಂದ ಅನುಮೋದಿತವಾಗಿ ಭಾರತದ ರಾಜಪತ್ರದಲ್ಲಿ ಮತ್ತು ಆ ಪ್ರತಿಯೊಂದು ರಾಜ್ಯದ ರಾಜ್ಯಪತ್ರದಲ್ಲಿ ಪ್ರಕಟವಾದರೆ, ಈ ಅಧಿನಿಯಮದ ಮೂಲಕ ಆಥವಾ ಅದರ ಅಡಿಯಲ್ಲಿ ಆ ರಾಜ್ಯಗಳ ಆಡಳಿತ ನ್ಯಾಯಾಧಿಕರಣಗಳಿಗೆ ಪ್ರದತ್ತವಾದ ಅಧಿಕಾರ ವ್ಯಾಪ್ತಿಯನ್ನು, ಅಧಿಕಾರವನ್ನು ಮತ್ತು ಪ್ರಾಧಿಕಾರವನ್ನು ಚಲಾಯಿಸಲು ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ಒಂದು ಜಂಟಿ ಆಡಳಿತ ನ್ಯಾಯಾಧಿಕರಣವನ್ನು ಸ್ಥಾಪಿಸಬಹುದು.

(4) (3)ನೇ ಉಪಪ್ರಕರಣದ ಅಡಿಯಲ್ಲಿನ ಒಂದು ಒಪ್ಪಂದವು, ಜಂಟಿ ಆಡಳಿತ ನ್ಯಾಯಾಧಿಕರಣದ ಹೆಸರು, ಭಾಗವಹಿಸುವ ರಾಜ್ಯಗಳು, ಜಂಟಿ ಆಡಳಿತ ನ್ಯಾಯಾಧಿಕರಣದ ಅಧ್ಯಕ್ಷನನ್ನು, ಉಪಾಧ್ಯಕ್ಷನನ್ನು ಮತ್ತು ಇತರ ಸದಸ್ಯರನ್ನು ಆಯ್ಕೆ ಮಾಡುವ ಸಂಬಂಧದಲ್ಲಿ ಒಳಗೂಡುವ ರೀತಿ, ನ್ಯಾಯಾಧಿಕರಣದ ನ್ಯಾಯಪೀಠವು ಅಥವಾ ನ್ಯಾಯಪೀಠಗಳು ಸಮಾವೇಶಗೊಳ್ಳತಕ್ಕ ಸ್ಥಳಗಳು, ಜಂಟಿ ಆಡಳಿತ ನ್ಯಾಯಾಧಿಕರಣಕ್ಕೆ ಸಂಬಂಧಿಸಿದಂತೆ ವಹಿಸತಕ್ಕ ವೆಚ್ಚಗಳನ್ನು ಭಾಗವಹಿಸುವ ರಾಜ್ಯಗಳೊಳಗೆ ಹಂಚುವ ಬಗ್ಗೆ - ಇವುಗಳಿಗೆ ಸಂಬಂಧಿಸಿದಂತ ಉಪಬಂಧಗಳನ್ನು ಒಳಗೊಂಡಿರತಕ್ಕದ್ದು ಮತ್ತು ಈ ಒಪ್ಪಂದವನ್ನು ಜಾರಿಗೊಳಿಸಲು ಅವಶ್ಯಕವೆಂದು ಅಥವಾ ವಿಹಿತವೆಂದು ಭಾವಿಸಬಹುದಾದಂಥ ಮತ್ತು ಈ ಅಧಿನಿಯಮಕ್ಕೆ ಅಸಂಗತವಾಗದಂಥ ಪೂರಕವಾದ, ಪ್ರಾಸಂಗಿಕವಾದ ಮತ್ತು ಅನುಷಂಗಿಕವಾದ ಇತರ ಉಪಬಂಧಗಳನ್ನು ಸಹ ಒಳಗೊಳ್ಳಬಹುದು.

(5) ಈ ಪ್ರಕರಣದ ಹಿಂದೆ ಹೇಳಿದ ಉಪಬಂಧಗಳಲ್ಲಿ ಅಥವಾ 5ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಕೇಂದ್ರ ಸರ್ಕಾರವು,-

(ಎ) ಯಾವುದೇ ರಾಜ್ಯ ಸರ್ಕಾರದ ಸಹಮತಿ ಪಡೆದು, (2)ನೇ ಉಪಪ್ರಕರಣದ ಮೇರೆಗೆ ಆ ರಾಜ್ಯಕ್ಕಾಗಿ ಸ್ಥಾಪಿಸಲಾದ ರಾಜ್ಯ ಆಡಳಿತ ನ್ಯಾಯಾಧಿಕರಣದ ನ್ಯಾಯಪೀಠದ ಅಥವಾ ನ್ಯಾಯಪೀಠಗಳ ಎಲ್ಲ ಸದಸ್ಯರನ್ನು ಅಥವಾ ಯಾರೇ ಸದಸ್ಯನನ್ನು ಅಧಿಸೂಚನೆಯ ಮೂಲಕ ಆ ರಾಜ್ಯಕ್ಕೆ ಸಂಬಂಧಿಸಿದ ಕೇಂದ್ರ ಆಡಳಿತ ನ್ಯಾಯಾಧಿಕರಣದ ನ್ಯಾಯಪೀಠದ ಅಥವಾ ನ್ಯಾಯಪೀಠಗಳ ಸದಸ್ಯರನ್ನಾಗಿ ಹೆಸರಿಸಬಹುದು ಮತ್ತು ಆ ನ್ಯಾಯಪೀಠವು ಅಥವಾ ನ್ಯಾಯಪೀಠಗಳು ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ಕೇಂದ್ರೀಯ ಆಡಳಿತ ನ್ಯಾಯಾಧಿಕರಣಕ್ಕೆ ಪ್ರದಾನ ಮಾಡಿದ ಅಧಿಕಾರ ವ್ಯಾಪ್ತಿಯನ್ನು, ಅಧಿಕಾರವನ್ನು ಮತ್ತು ಪ್ರಾಧಿಕಾರವನ್ನು ಚಲಾಯಿಸತಕ್ಕದ್ದು.

(ಬಿ) ಯಾವುದೇ ರಾಜ್ಯ ಸರ್ಕಾರದಿಂದ ಈ ಸಂಬಂಧದಲ್ಲಿ ಕೋರಿಕೆಯು ಬಂದ ಮೇಲೆ, ಅಧಿಸೂಚನೆಯ ಮೂಲಕ, ಆ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಕೇಂದ್ರ ಆಡಳಿತ ನ್ಯಾಯಾಧಿಕರಣದ ನ್ಯಾಯಪೀಠದ ಅಥವಾ ನ್ಯಾಯಪೀಠಗಳ ಎಲ್ಲ ಸದಸ್ಯರನ್ನು ಅಥವಾ ಅವರಲ್ಲಿ ಯಾರೇ ಸದಸ್ಯನನ್ನು ಆ ರಾಜ್ಯದಲ್ಲಿನ ರಾಜ್ಯ ಆಡಳಿತ ನ್ಯಾಯಾಧಿಕರಣದ ನ್ಯಾಯಪೀಠದ ಅಥವಾ ನ್ಯಾಯಪೀಠಗಳ ಸದಸ್ಯರನ್ನಾಗಿ ನಿಯುಕ್ತಿಗೊಳಿಸಬಹುದು ಮತ್ತು ಆ ನ್ಯಾಯಪೀಠವು ಅಥವಾ ನ್ಯಾಯಪೀಠಗಳು ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಆ ರಾಜ್ಯದ ಆಡಳಿತ ನ್ಯಾಯಾಧಿಕರಣಕ್ಕೆ ಪ್ರದಾನ ಮಾಡಿದ ಅಧಿಕಾರ ವ್ಯಾಪ್ತಿಯನ್ನು, ಅಧಿಕಾರಗಳನ್ನು ಮತ್ತು ಪ್ರಾಧಿಕಾರವನ್ನು ಚಲಾಯಿಸಬಹುದು ಮತ್ತು ಹಾಗೆ ಹೆಸರಿಸಿದ ತರುವಾಯ ರಾಜ್ಯ ಆಡಳಿತ ನ್ಯಾಯಾಧಿಕರಣದ ನ್ಯಾಯಪೀಠವನ್ನು ಅಥವಾ ಪೀಠಗಳನ್ನು ಅಥವಾ ಸಂದರ್ಭಾನುಸಾರ, ಕೇಂದ್ರ ಆಡಳಿತ ನ್ಯಾಯಾಧಿಕರಣದ ನ್ಯಾಯಪೀಠವನ್ನು ಅಥವಾ ನ್ಯಾಯಪೀಠಗಳನ್ನು, ಎಲ್ಲಾ ವ್ಯವಹಾರಗಳ ಸಂಬಂಧದಲ್ಲಿ ಸಂವಿಧಾನದ 323ಎ ಅನುಚ್ಛೇದದ ಮತ್ತು ಈ ಅಧಿನಿಯಮದ ಉಪಬಂಧಗಳ ಮೇರೆಗೆ ಸ್ಥಾಪಿಸಲಾದ ಕೇಂದ್ರ ಆಡಳಿತ ನ್ಯಾಯಾಧಿಕರಣವೆಂಬುದಾಗಿ ಅಥವಾ ಆ ರಾಜ್ಯದ ಆಡಳಿತ ನ್ಯಾಯಾಧಿಕರಣವೆಂಬುದಾಗಿ ಭಾವಿಸತಕ್ಕದ್ದು.

(6) (5)ನೇ ಉಪಪ್ರಕರಣದ ಮೇರೆಗಿನ ಪ್ರತಿಯೊಂದು ಅಧಿಸೂಚನೆಯು, ಕೇಂದ್ರ ಆಡಳಿತ ನ್ಯಾಯಾಧಿಕರಣ ಮತ್ತು ರಾಜ್ಯ ಆಡಳಿತ ನ್ಯಾಯಾಧಿಕರಣ – ಇವೆರಡರಲ್ಲೂ ಸದಸ್ಯರಾಗಿರುವವರಿಗೆ ಸಂಬಂಧಪಟ್ಟಂತೆ ವಹಿಸಿದ ವೆಚ್ಚವನ್ನು ಸಂಬಂಧಿಸಿದ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ – ಇವುಗಳ ನಡುವೆ ಹಂಚಿಕೆ ಮಾಡುವ ಬಗ್ಗೆಯೂ ಉಪಬಂಧಿಸತಕ್ಕದ್ದು ಮತ್ತು ಅವಶ್ಯವೆಂದು ಅಥವಾ ವಿಹಿತವೆಂದು ಭಾವಿಸಬಹುದಾದಂಥ ಮತ್ತು ಈ ಅಧಿನಿಯಮಕ್ಕೆ ಅಸಂಗತವಾಗದಂಥ ಇತರ ಪ್ರಾಸಂಗಿಕ ಮತ್ತು ಅನುಷಂಗಿಕ ಉಪಬಂಧಗಳನ್ನು ಕಲ್ಪಿಸತಕ್ಕದ್ದು.

**5. ನ್ಯಾಯಾಧಿಕರಣಗಳ ಮತ್ತು ಅವುಗಳ ನ್ಯಾಯಪೀಠಗಳ ರಚನೆ.–** (1) ಪ್ರತಿಯೊಂದು ನ್ಯಾಯಾಧಿಕರಣವು ಒಬ್ಬ ಅಧ್ಯಕ್ಷನನ್ನು ಮತ್ತು ಸಮುಚಿತ ಸರ್ಕಾರವು ಸೂಕ್ತವೆಂದು ಭಾವಿಸಬಹುದಾದಷ್ಟು ಸಂಖ್ಯೆಯ ಉಪಾಧ್ಯಕ್ಷರನ್ನು ಮತ್ತು ನ್ಯಾಯಿಕ ಸದಸ್ಯರನ್ನು ಹಾಗೂ ಆಡಳಿತ ಸದಸ್ಯರನ್ನು ಒಳಗೊಂಡಿರತಕ್ಕದ್ದು ಮತ್ತು ಅಂಥ ನ್ಯಾಯಾಧಿಕರಣದ ನ್ಯಾಯಪೀಠಗಳು ಈ ಅಧಿನಿಯಮದ ಇತರ ಉಪಬಂಧಗಳಿಗೆ ಒಳಪಟ್ಟು, ಅದರ ಅಧಿಕಾರ ವ್ಯಾಪ್ತಿಯನ್ನು, ಅಧಿಕಾರವನ್ನು ಮತ್ತು ಪ್ರಾಧಿಕಾರವನ್ನು ಚಲಾಯಿಸಬಹುದು.

(2) ಈ ಅಧಿನಿಯಮದ ಇತರ ಉಪಬಂಧಗಳಿಗೆ ಒಳಪಟ್ಟು, ಒಂದು ನ್ಯಾಯಪೀಠವು ಒಬ್ಬ ನ್ಯಾಯಿಕ ಸದಸ್ಯನನ್ನು ಮತ್ತು ಒಬ್ಬ ಆಡಳಿತ ಸದಸ್ಯನನ್ನು ಒಳಗೊಂಡಿರತಕ್ಕದ್ದು.

(3) [* * *]

(4) (1)ನೇ ಉಪಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಅಧ್ಯಕ್ಷನು,–

(ಎ) ತಾನು ನೇಮಕಗೊಂಡ ನ್ಯಾಯಪೀಠದ ನ್ಯಾಯಿಕ ಸದಸ್ಯನ ಅಥವಾ ಆಡಳಿತ ಸದಸ್ಯನ ಪ್ರಕಾರ್ಯಗಳನ್ನು ನಿರ್ವಹಿಸುವುದರ ಜೊತೆಗೆ, ಯಾವುದೇ ಇತರ ನ್ಯಾಯಪೀಠದ ನ್ಯಾಯಿಕ ಸದಸ್ಯನ ಅಥವಾ ಸಂದರ್ಭಾನುಸಾರ ಆಡಳಿತ ಸದಸ್ಯನ ಪ್ರಕಾರ್ಯಗಳನ್ನು ನಿರ್ವಹಿಸಬಹುದು;

(ಬಿ) ಉಪಾಧ್ಯಕ್ಷನನ್ನು ಅಥವಾ ಇತರ ಸದಸ್ಯನನ್ನು ಒಂದು ನ್ಯಾಯಪೀಠದಿಂದ ಇನ್ನೊಂದು ನ್ಯಾಯಪೀಠಕ್ಕೆ ವರ್ಗಾಯಿಸಬಹುದು;

(ಸಿ) ಒಂದು ನ್ಯಾಯಪೀಠಕ್ಕೆ ನೇಮಕಗೊಂಡ ಉಪಾಧ್ಯಕ್ಷನನ್ನು ಅಥವಾ ನ್ಯಾಯಿಕ ಸದಸ್ಯನನ್ನು ಅಥವಾ ಆಡಳಿತ ಸದಸ್ಯನನ್ನು ಇನ್ನೊಂದು ನ್ಯಾಯಪೀಠದ ಉಪಾಧ್ಯಕ್ಷನ ಅಥವಾ ಸಂದರ್ಭಾನುಸಾರ ನ್ಯಾಯಿಕ ಸದಸ್ಯನ ಅಥವಾ ಆಡಳಿತ ಸದಸ್ಯನ ಪ್ರಕಾರ್ಯಗಳನ್ನು ನಿರ್ವಹಿಸಲು ಅಧಿಕೃತಗೊಳಿಸಬಹುದು; ಮತ್ತು

(ಡಿ) ಯಾವುದೇ ಮೊಕದ್ದಮೆಯಲ್ಲಿ ಅಥವಾ ಮೊಕದ್ದಮೆಗಳಲ್ಲಿ ಒಳಗೊಂಡಿರುವ ವಿಷಯಗಳ ಸ್ವರೂಪವನ್ನು ಗಮನಿಸಲಾಗಿ ತನ್ನ ಅಭಿಪ್ರಾಯದಲ್ಲಿ ಅಥವಾ ಈ ಬಗ್ಗೆ ಕೇಂದ್ರ ಸರ್ಕಾರವು ರಚಿಸಿದ ನಿಯಮಗಳ ಮೇರೆಗೆ ಆ ಮೊಕದ್ದಮೆಯನ್ನು ಅಥವಾ ಮೊಕದ್ದಮೆಗಳನ್ನು ಇಬ್ಬರಿಗಿಂತ ಹೆಚ್ಚು ಜನ ಸದಸ್ಯರಿಂದ ಕೂಡಿದ ನ್ಯಾಯಪೀಠವು ತೀರ್ಮಾನಿಸುವುದು ಅಗತ್ಯವಾಗಿದ್ದರೆ, ಆ ಉದ್ದೇಶಕ್ಕಾಗಿ ತಾನು ಸೂಕ್ತವೆಂದು ಭಾವಿಸಬಹುದಾದಂಥ ಸಾಮಾನ್ಯ ಅಥವಾ ವಿಶೇಷ ಆದೇಶಗಳನ್ನು ಹೊರಡಿಸಬಹುದು:

ಪರಂತು, ಈ ಖಂಡಕ್ಕನುಸಾರವಾಗಿ ರಚಿತವಾದ ಪ್ರತಿಯೊಂದು ನ್ಯಾಯಪೀಠವು ಕೊನೇಪಕ್ಷ ಒಬ್ಬ ನ್ಯಾಯಿಕ ಸದಸ್ಯನನ್ನು ಮತ್ತು ಒಬ್ಬ ಆಡಳಿತ ಸದಸ್ಯನನ್ನು ಒಳಗೊಂಡಿರತಕ್ಕದ್ದು.

(5) [* * *]

(6) ಈ ಪ್ರಕರಣದ ಹಿಂದೆ ಹೇಳಿದ ಉಪಬಂಧಗಳಲ್ಲಿ ಏನೇ ಅಡಕವಾಗಿದ್ದಾಗ್ಯೂ, ಅಧ್ಯಕ್ಷನು ಅಥವಾ ಈ ಬಗ್ಗೆ ಅವನು ಅಧಿಕೃತಗೊಳಿಸಿದ ಯಾರೇ ಇತರ ಸದಸ್ಯನು ಏಕಸದಸ್ಯ ನ್ಯಾಯಪೀಠವಾಗಿ ಕಾರ್ಯನಿರ್ವಹಿಸಲು ಮತ್ತು ಅಧ್ಯಕ್ಷನು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ನಿರ್ದಿಷ್ಟಪಡಿಸಬಹುದಾದಂತಹ ಮೊಕದ್ದಮೆಗಳಿಗೆ ಅಥವಾ ಮೊಕದ್ದಮೆಗಳ ವರ್ಗಗಳಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ನ್ಯಾಯಾಧಿಕರಣದ ಅಧಿಕಾರ ವ್ಯಾಪ್ತಿಯನ್ನು, ಅಧಿಕಾರವನ್ನು ಮತ್ತು ಪ್ರಾಧಿಕಾರವನ್ನು ಚಲಾಯಿಸಲು ಸಕ್ಷಮನಾಗಿರತಕ್ಕದ್ದು:

ಪರಂತು, ಯಾವುದೇ ಅಂತಹ ಮೊಕದ್ದಮೆಯ ಅಥವಾ ವಿಷಯದ ಸುನಾವಣೆಯ ಯಾವುದೇ ಹಂತದಲ್ಲಿ, ಆ ಮೊಕದ್ದಮೆಯು ಅಥವಾ ವಿಷಯವು ಇಬ್ಬರು ಸದಸ್ಯರುಗಳನ್ನೊಳಗೊಂಡ ನ್ಯಾಯಪೀಠವು ಸುನಾವಣೆ ಮಾಡಬೇಕಾದಂಥ ಸ್ವರೂಪದ್ದಾಗಿದೆ ಎಂದು ಅಧ್ಯಕ್ಷನಿಗೆ ಅಥವಾ ಅಂತಹ ಸದಸ್ಯನಿಗೆ ಕಂಡುಬಂದರೆ, ಅಧ್ಯಕ್ಷನು ಆ ಮೊಕದ್ದಮೆಯನ್ನು ಅಥವಾ ವಿಷಯವನ್ನು ತಾನು ಸೂಕ್ತವೆಂದು ಭಾವಿಸಬಹುದಾದಂತಹ ನ್ಯಾಯಪೀಠಕ್ಕೆ

ವರ್ಗಾಯಿಸಬಹುದು ಅಥವಾ ಸಂದರ್ಭಾನುಸಾರ ಸದಸ್ಯನು ಹಾಗೆ ವರ್ಗಾಯಿಸುವಂತೆ ಕೋರಿ ಅದನ್ನು ಅಧ್ಯಕ್ಷನಿಗೆ ಕಳುಹಿಸಿಕೊಡಬಹುದು.

(7) ಈ ಅಧಿನಿಯಮದ ಇತರ ಉಪಬಂಧಗಳಿಗೆ ಒಳಪಟ್ಟು, ಕೇಂದ್ರ ಆಡಳಿತ ನ್ಯಾಯಾಧಿಕರಣದ ನ್ಯಾಯಪೀಠಗಳು ಸಾಮಾನ್ಯವಾಗಿ (ಪ್ರಧಾನ ನ್ಯಾಯಪೀಠವೆಂದು ಕರೆಯತಕ್ಕ) ನವದೆಹಲಿಯಲ್ಲಿ ಮತ್ತು ಅಲಹಾಬಾದ್, ಕಲ್ಕತ್ತ, ಮದ್ರಾಸು, ನವಮುಂಬಯಿ – ಈ ನಗರಗಳಲ್ಲಿ ಮತ್ತು ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂತಹ ಇತರ ಸ್ಥಳಗಳಲ್ಲಿ ಉಪವೇಶನ ನಡೆಸತಕ್ಕದ್ದು.

(8) ಈ ಅಧಿನಿಯಮದ ಇತರ ಉಪಬಂಧಗಳಿಗೆ ಒಳಪಟ್ಟು, ರಾಜ್ಯ ಆಡಳಿತ ನ್ಯಾಯಾಧಿಕರಣದ ಪ್ರಧಾನ ನ್ಯಾಯಪೀಠವು ಮತ್ತು ಇತರ ನ್ಯಾಯಪೀಠಗಳು ಸಾಮಾನ್ಯವಾಗಿ ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಸ್ಥಳಗಳಲ್ಲಿ ತಮ್ಮ ಉಪವೇಶನಗಳನ್ನು ನಡೆಸತಕ್ಕದ್ದು.

**6. ಅಧ್ಯಕ್ಷನಾಗಿ, ಉಪಾಧ್ಯಕ್ಷನಾಗಿ ಅಥವಾ ಇತರ ಸದಸ್ಯನಾಗಿ ನೇಮಕಗೊಳ್ಳಲು ಅಗತ್ಯವಾದ ಅರ್ಹತೆಗಳು.**– (1) ಒಬ್ಬ ವ್ಯಕ್ತಿಯು,–

(ಎ) ಉಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿರುವ ಅಥವಾ ಆಗಿದ್ದ ಹೊರತು; ಅಥವಾ

(ಬಿ) ಕೊನೇಪಕ್ಷ ಎರಡು ವರ್ಷಗಳವರೆಗೆ ಉಪಾಧ್ಯಕ್ಷನ ಪದವನ್ನು ಧಾರಣ ಮಾಡಿರುವ ಹೊರತು;

(ಸಿ) ಕೊನೇಪಕ್ಷ ಎರಡು ವರ್ಷಗಳವರೆಗೆ ಭಾರತ ಸರ್ಕಾರದ ಕಾರ್ಯದರ್ಶಿಯ ಹುದ್ದೆಯನ್ನು ಅಥವಾ ಕೇಂದ್ರ ಸರ್ಕಾರದಲ್ಲಿ ಅಥವಾ ರಾಜ್ಯ ಸರ್ಕಾರದಲ್ಲಿ ಭಾರತ ಸರ್ಕಾರದ ಕಾರ್ಯದರ್ಶಿಯ ವೇತನ ಶ್ರೇಣಿಗಿಂತ ಕಡಿಮೆಯಲ್ಲದ ವೇತನಶ್ರೇಣಿಯ ಯಾವುದೇ ಇತರ ಹುದ್ದೆಯನ್ನು ಧಾರಣ ಮಾಡಿರುವ ಹೊರತು

– ಅಧ್ಯಕ್ಷನಾಗಿ ನೇಮಕಗೊಳ್ಳಲು ಅರ್ಹನಾಗತಕ್ಕದ್ದಲ್ಲ.

(2) ಒಬ್ಬ ವ್ಯಕ್ತಿಯು,–

(ಎ) ಉಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿರುವ ಅಥವಾ ಆಗಿದ್ದ ಹೊರತು ಅಥವಾ ಆಗಲು ಅರ್ಹನಾಗಿರುವ ಹೊರತು; ಅಥವಾ

(ಬಿ) ಕೊನೇಪಕ್ಷ ಎರಡು ವರ್ಷಗಳವರೆಗೆ ಭಾರತ ಸರ್ಕಾರದ ಕಾರ್ಯದರ್ಶಿಯ ಹುದ್ದೆಯನ್ನು ಅಥವಾ ಕೇಂದ್ರ ಸರ್ಕಾರದಲ್ಲಿ ಅಥವಾ ರಾಜ್ಯ ಸರ್ಕಾರದಲ್ಲಿ ಭಾರತ ಸರ್ಕಾರದ ಕಾರ್ಯದರ್ಶಿಯ ವೇತನ ಶ್ರೇಣಿಗಿಂತ ಕಡಿಮೆಯಲ್ಲದ ವೇತನ ಶ್ರೇಣಿಯನ್ನು ಯಾವುದೇ ಇತರ ಹುದ್ದೆಯನ್ನು ಧಾರಣ ಮಾಡಿರುವ ಹೊರತು; ಅಥವಾ

(ಬಿಬಿ) ಕೊನೇಪಕ್ಷ ಐದು ವರ್ಷಗಳವರೆಗೆ ಭಾರತ ಸರ್ಕಾರದ ಅಡಿಷನಲ್ ಕಾರ್ಯದರ್ಶಿಯ ಹುದ್ದೆಯನ್ನು ಅಥವಾ ಕೇಂದ್ರ ಸರ್ಕಾರದಲ್ಲಿ ಅಥವಾ ರಾಜ್ಯ ಸರ್ಕಾರದಲ್ಲಿ ಭಾರತ ಸರ್ಕಾರದ ಅಡಿಷನಲ್ ಕಾರ್ಯದರ್ಶಿಯ ವೇತನ ಶ್ರೇಣಿಗಿಂತ ಕಡಿಮೆಯಲ್ಲದ ವೇತನ ಶ್ರೇಣಿಯ ಯಾವುದೇ ಇತರ ಹುದ್ದೆಯನ್ನು ಧಾರಣ ಮಾಡಿರುವ ಹೊರತು; ಅಥವಾ

(ಸಿ) ಮೂರು ವರ್ಷಗಳಿಗೆ ಕಡಿಮೆಯಿಲ್ಲದ ಅವಧಿಯವರೆಗೆ ನ್ಯಾಯಿಕ ಸದಸ್ಯನಾಗಿ ಅಥವಾ ಆಡಳಿತ ಸದಸ್ಯನಾಗಿ ಪದಧಾರಣ ಮಾಡಿರುವ ಹೊರತು

– ಉಪಾಧ್ಯಕ್ಷನಾಗಿ ನೇಮಕಗೊಳ್ಳಲು ಅರ್ಹನಾಗತಕ್ಕದ್ದಲ್ಲ.

(3) ಒಬ್ಬ ವ್ಯಕ್ತಿಯು,–

(ಎ) ಉಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿರುವ ಅಥವಾ ಆಗಿದ್ದ ಅಥವಾ ಆಗಲು ಅರ್ಹನಾಗಿರುವ ಹೊರತು; ಅಥವಾ

(ಬಿ) ಭಾರತ ಕಾನೂನು ಸೇವೆಯ ಸದಸ್ಯನಾಗಿದ್ದು ಕೊನೇಪಕ್ಷ ಮೂರು ವರ್ಷಗಳವರೆಗೆ ಆ ಸೇವೆಯ ಮೊದಲ ದರ್ಜೆಯ ಪದವನ್ನು ಧಾರಣ ಮಾಡಿರುವ ಹೊರತು

– ನ್ಯಾಯಿಕ ಸದಸ್ಯನಾಗಿ ನೇಮಕಗೊಳ್ಳಲು ಅರ್ಹನಾಗತಕ್ಕದ್ದಲ್ಲ.

(3ಎ) ಒಬ್ಬ ವ್ಯಕ್ತಿಯು,-

(ಎ) ಕೊನೇಪಕ್ಷ ಎರಡು ವರ್ಷಗಳವರೆಗೆ ಭಾರತ ಸರ್ಕಾರದ ಅಡಿಷನಲ್ ಕಾರ್ಯದರ್ಶಿ ಹುದ್ದೆಯನ್ನು ಅಥವಾ ಕೇಂದ್ರ ಸರ್ಕಾರದಲ್ಲಿ ಅಥವಾ ರಾಜ್ಯ ಸರ್ಕಾರದಲ್ಲಿ ಭಾರತ ಸರ್ಕಾರದ ಅಡಿಷನಲ್ ಕಾರ್ಯದರ್ಶಿಯ ವೇತನ ಶ್ರೇಣಿಗಿಂತ ಕಡಿಮೆಯಲ್ಲದ ವೇತನ ಶ್ರೇಣಿಯ ಯಾವುದೇ ಇತರ ಹುದ್ದೆಯನ್ನು ಧಾರಣ ಮಾಡಿರುವ ಹೊರತು; ಅಥವಾ

(ಬಿ) ಕೊನೇಪಕ್ಷ ಭಾರತ ಸರ್ಕಾರದ ಜಂಟಿ ಕಾರ್ಯದರ್ಶಿಯ ಹುದ್ದೆಯನ್ನು ಅಥವಾ ಕೇಂದ್ರ ಸರ್ಕಾರದಲ್ಲಿ ಅಥವಾ ರಾಜ್ಯ ಸರ್ಕಾರದಲ್ಲಿ ಭಾರತ ಸರ್ಕಾರದ ಜಂಟಿ ಕಾರ್ಯದರ್ಶಿಯ ವೇತನ ಶ್ರೇಣಿಗಿಂತ ಕಡಿಮೆಯಲ್ಲದ ವೇತನ ಶ್ರೇಣಿಯ ಯಾವುದೇ ಇತರ ಹುದ್ದೆಯನ್ನು ಧಾರಣ ಮಾಡಿರುವ ಹೊರತು

- ಆಡಳಿತ ಸದಸ್ಯನಾಗಿ ನೇಮಕಗೊಳ್ಳಲು ಅರ್ಹನಾಗತಕ್ಕದ್ದಲ್ಲ ಮತ್ತು ಮೇಲ್ಕಂಡ ಎರಡೂ ಸಂದರ್ಭಗಳಲ್ಲಿ ಅವನು ಆಡಳಿತದಲ್ಲಿ ಸಾಕಷ್ಟು ಅನುಭವವನ್ನು ಹೊಂದಿದವನಾಗಿರತಕ್ಕದ್ದು.

(4) (7)ನೇ ಉಪಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ರಾಷ್ಟ್ರಪತಿಯು ಕೇಂದ್ರ ಆಡಳಿತ ನ್ಯಾಯಾಧಿಕರಣದ ಅಧ್ಯಕ್ಷನನ್ನು, ಉಪಾಧ್ಯಕ್ಷನನ್ನು ಮತ್ತು ಪ್ರತಿಯೊಬ್ಬ ಇತರ ಸದಸ್ಯನನ್ನು ನೇಮಕ ಮಾಡತಕ್ಕುದು.

(5) (7)ನೇ ಉಪಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ರಾಷ್ಟ್ರಪತಿಯು ಸಂಬಂಧಪಟ್ಟ ರಾಜ್ಯದ ರಾಜ್ಯಪಾಲರೊಡನೆ ಸಮಾಲೋಚಿಸಿದ ತರುವಾಯ, ರಾಜ್ಯದ ಆಡಳಿತ ನ್ಯಾಯಾಧಿಕರಣದ ಅಧ್ಯಕ್ಷನನ್ನು, ಉಪಾಧ್ಯಕ್ಷನನ್ನು ಮತ್ತು ಪ್ರತಿಯೊಬ್ಬ ಇತರ ಸದಸ್ಯನನ್ನು ನೇಮಕ ಮಾಡತಕ್ಕದ್ದು.

(6) ಜಂಟಿ ಆಡಳಿತ ನ್ಯಾಯಾಧಿಕರಣದ ಅಧ್ಯಕ್ಷನನ್ನು, ಉಪಾಧ್ಯಕ್ಷನನ್ನು ಮತ್ತು ಪ್ರತಿಯೊಬ್ಬ ಇತರ ಸದಸ್ಯನನ್ನು, ಭಾಗವಹಿಸುವ ರಾಜ್ಯ ಸರ್ಕಾರಗಳು ಪರಸ್ಪರ ಮಾಡಿಕೊಂಡ ಮತ್ತು 4ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಪ್ರಕಟಗೊಂಡ ಒಪ್ಪಂದದ ನಿಬಂಧನೆಗಳಿಗೆ ಒಳಪಟ್ಟು ಮತ್ತು (7)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು, ಸಂಬಂಧಿಸಿದ ರಾಜ್ಯಗಳ ರಾಜ್ಯಪಾಲರೊಡನೆ ಸಮಾಲೋಚಿಸಿದ ತರುವಾಯ ನೇಮಕ ಮಾಡತಕ್ಕದ್ದು.

(7) ಭಾರತದ ಮುಖ್ಯ ನ್ಯಾಯಮೂರ್ತಿಯೊಡನೆ ಸಮಾಲೋಚಿಸಿದ ತರುವಾಯ ಹೊರತು, ಈ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಅರ್ಹತೆಗಳನ್ನು ಹೊಂದಿರುವ ಯಾವನೇ ವ್ಯಕ್ತಿಯನ್ನು ಅಧ್ಯಕ್ಷನಾಗಿ, ಉಪಾಧ್ಯಕ್ಷನಾಗಿ ಅಥವಾ ಸದಸ್ಯನಾಗಿ ನೇಮಕ ಮಾಡತಕ್ಕದ್ದಲ್ಲ.

**ವಿವರಣೆ**.- ಈ ಪ್ರಕರಣದ ಉದ್ದೇಶಗಳಿಗಾಗಿ, ಯಾರೇ ವ್ಯಕ್ತಿಯು ಕೇಂದ್ರ ಸರ್ಕಾರದಲ್ಲಿ ಅಥವಾ ರಾಜ್ಯ ಸರ್ಕಾರದಲ್ಲಿ ಯಾವುದೇ ಹುದ್ದೆಯನ್ನು ಧಾರಣ ಮಾಡಿದ ಅವಧಿಯನ್ನು ಲೆಕ್ಕ ಹಾಕುವಲ್ಲಿ (ಈ ಅಧಿನಿಯಮದ ಮೇರೆಗಿನ ಹುದ್ದೆಯೂ ಸೇರಿದಂತೆ) ಅವನು ಕೇಂದ್ರ ಸರ್ಕಾರದಲ್ಲಿ ಅಥವಾ ರಾಜ್ಯ ಸರ್ಕಾರದಲ್ಲಿ ಈ ಮೊದಲು ತಿಳಿಸಿರುವ ಹುದ್ದೆಯ ವೇತನ ಶ್ರೇಣಿಯಲ್ಲಿ ಅಥವಾ ಅದಕ್ಕಿಂತ ಹೆಚ್ಚಿನ ವೇತನ ಶ್ರೇಣಿಯಲ್ಲಿ ಹೊಂದಿದ್ದ ಯಾವುದೇ ಇತರ ಹುದ್ದೆಯ ಅವಧಿಯನ್ನು ಸಹ ಸೇರಿಸತಕ್ಕದ್ದು.

**7. ಉಪಾಧ್ಯಕ್ಷನು ಕೆಲವು ಸಂದರ್ಭಗಳಲ್ಲಿ ಅಧ್ಯಕ್ಷನಾಗಿ ಕಾರ್ಯನಿರ್ವಹಿಸುವುದು ಅಥವಾ ಅವನ ಪ್ರಕಾರ್ಯಗಳನ್ನು ನೆರವೇರಿಸುವುದು.**- (1) ಅಧ್ಯಕ್ಷನ ಸ್ಥಾನವು ಅವನ ಮರಣದ ನಿಮಿತ್ತ, ರಾಜೀನಾಮೆಯ ಕಾರಣದಿಂದ ಅಥವಾ ಅನ್ಯಥಾ ತೆರವಾದ ಸಂದರ್ಭಗಳಲ್ಲಿ, ಉಪಾಧ್ಯಕ್ಷನು ಅಥವಾ ಸಂದರ್ಭಾನುಸಾರ, ಉಪಾಧ್ಯಕ್ಷರ ಪೈಕಿ ಈ ಬಗ್ಗೆ ಸಮುಚಿತ ಸರ್ಕಾರವು ಅಧಿಸೂಚನೆಯ ಮೂಲಕ ಅಧಿಕೃತಗೊಳಿಸಬಹುದಾದಂತಹ ಒಬ್ಬ ಉಪಾಧ್ಯಕ್ಷನು ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರ ಹಾಗೆ ತೆರವಾದ ಸ್ಥಾನವನ್ನು ಭರ್ತಿ ಮಾಡಲು ನೇಮಕಗೊಳ್ಳುವ ಹೊಸ ಅಧ್ಯಕ್ಷನು ತನ್ನ ಪದವನ್ನು ವಹಿಸಿಕೊಳ್ಳುವವರೆಗೆ ಅಧ್ಯಕ್ಷನಾಗಿ ಕಾರ್ಯನಿರ್ವಹಿಸತಕ್ಕದ್ದು.

(2) ಗೈರು ಹಾಜರಿಯ, ಅನಾರೋಗ್ಯದ ಅಥವಾ ಇತರ ಯಾವುದೇ ಕಾರಣದಿಂದ ಅಧ್ಯಕ್ಷನಿಗೆ ತನ್ನ ಪ್ರಕಾರ್ಯಗಳನ್ನು ನಿರ್ವಹಿಸಲು ಸಾಧ್ಯವಾಗದಿದ್ದರೆ, ಉಪಾಧ್ಯಕ್ಷನು ಅಥವಾ ಸಂದರ್ಭಾನುಸಾರ ಉಪಾಧ್ಯಕ್ಷರ ಪೈಕಿ ಈ ಬಗ್ಗೆ ಸಮುಚಿತ ಸರ್ಕಾರವು ಅಧಿಸೂಚನೆಯ ಮೂಲಕ ಅಧಿಕೃತಗೊಳಿಸಬಹುದಾದಂತಹ ಒಬ್ಬ ಉಪಾಧ್ಯಕ್ಷನು, ಸದರಿ ಅಧ್ಯಕ್ಷನು ತನ್ನ ಕರ್ತವ್ಯಗಳನ್ನು ಮತ್ತೆ ವಹಿಸಿಕೊಳ್ಳುವ ದಿನಾಂಕದವರೆಗೆ ಅವನ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

**8. ಪದಾವಧಿ.**- ಅಧ್ಯಕ್ಷನು, ಉಪಾಧ್ಯಕ್ಷನು ಅಥವಾ ಇತರ ಸದಸ್ಯನು, ತನ್ನ ಪದವನ್ನು ವಹಿಸಿಕೊಂಡ ದಿನಾಂಕದಿಂದ ಐದು ವರ್ಷಗಳ ಅವಧಿಯವರೆಗೆ ಅಧ್ಯಕ್ಷನಾಗಿ, ಉಪಾಧ್ಯಕ್ಷನಾಗಿ ಅಥವಾ ಇತರ ಸದಸ್ಯನಾಗಿ ಪದವನ್ನು

ಧಾರಣ ಮಾಡಿರತಕ್ಕದ್ದು. ಆದರೆ, ಅವನು ಐದು ವರ್ಷಗಳ ಇನ್ನೊಂದು ಅವಧಿಗೆ ಪುನರ್‌ನೇಮಕಗೊಳ್ಳಲು ಅರ್ಹನಾಗತಕ್ಕದ್ದು:

ಪರಂತು,–

(ಎ) ಅಧ್ಯಕ್ಷನಿಗೆ ಅಥವಾ ಉಪಾಧ್ಯಕ್ಷನಿಗೆ ಅರವತ್ತೈದು ವರ್ಷ ವಯಸ್ಸಾದ ತರುವಾಯ; ಮತ್ತು

(ಬಿ) ಇತರ ಸದಸ್ಯನಿಗೆ ಅರವತ್ತೆರಡು ವರ್ಷ ವಯಸ್ಸಾದ ತರುವಾಯ;

– ಆ ಅಧ್ಯಕ್ಷನು, ಉಪಾಧ್ಯಕ್ಷನು ಅಥವಾ ಇತರ ಸದಸ್ಯನು ಪದಧಾರಣ ಮಾಡತಕ್ಕದ್ದಲ್ಲ.

**9. ಪದಾಧಿಕಾರಿಗಳು ರಾಜೀನಾಮೆ ನೀಡುವುದು ಮತ್ತು ಅವರನ್ನು ತೆಗೆದುಹಾಕುವುದು.**– (1) ಅಧ್ಯಕ್ಷನು, ಉಪಾಧ್ಯಕ್ಷನು ಅಥವಾ ಇತರ ಸದಸ್ಯನು ತನ್ನ ಪದಕ್ಕೆ ರಾಜೀನಾಮೆ ನೀಡಬಯಸಿದರೆ ರಾಷ್ಟ್ರಪತಿಗೆ ಲಿಖಿತ ನೋಟೀಸನ್ನು ಸಲ್ಲಿಸಿ ಹಾಗೆ ಮಾಡಬಹುದು:

ಪರಂತು, ಅಧ್ಯಕ್ಷನಿಗೆ, ಉಪಾಧ್ಯಕ್ಷನಿಗೆ ಅಥವಾ ಇತರ ಸದಸ್ಯನಿಗೆ, ಪದವನ್ನು ಆ ಕೂಡಲೇ ತ್ಯಜಿಸಲು ರಾಷ್ಟ್ರಪತಿಯು ಅನುಮತಿ ನೀಡಿರುವ ಹೊರತು ಅವನು ರಾಷ್ಟ್ರಪತಿಗೆ ಆ ನೋಟೀಸು ತಲುಪಿದ ದಿನಾಂಕದಿಂದ ಮೂರು ತಿಂಗಳು ಮುಕ್ತಾಯವಾಗುವವರೆಗೆ ಅಥವಾ ಅವನ ಉತ್ತರಾಧಿಕಾರಿಯಾಗಿ ಯುಕ್ತವಾಗಿ ನೇಮಕಗೊಂಡ ವ್ಯಕ್ತಿಯು ಆ ಪದವನ್ನು ವಹಿಸಿಕೊಳ್ಳುವವರೆಗೆ ಅಥವಾ ತನ್ನ ಪದಾವಧಿಯು ಮುಕ್ತಾಯವಾಗುವವರೆಗೆ – ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಆ ಪದದಲ್ಲಿ ಮುಂದುವರಿಯತಕ್ಕದ್ದು.

(2) ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶನು ಅಧ್ಯಕ್ಷನಿಗೆ, ಉಪಾಧ್ಯಕ್ಷನಿಗೆ ಅಥವಾ ಇತರ ಸದಸ್ಯನಿಗೆ ಅವನ ವಿರುದ್ಧ ಮಾಡಲಾಗಿರುವ ಆರೋಪಗಳನ್ನು ತಿಳಿಸಿದ ತರುವಾಯ ಮತ್ತು ಆ ಆರೋಪಗಳ ಸಂಬಂಧದಲ್ಲಿ ತನ್ನ ಅಹವಾಲನ್ನು ಹೇಳಿಕೊಳ್ಳಲು ಅವನಿಗೆ ಸೂಕ್ತ ಅವಕಾಶವನ್ನು ಕೊಟ್ಟು, ವಿಚಾರಣೆ ನಡೆಸಿದ ಮೇಲೆ ಅವನ ದುರ್ನಡತೆ ಅಥವಾ ಅಸಮರ್ಥನೆಯು ರುಜುವಾತಾದರೆ ಅದನ್ನು ಆಧರಿಸಿ ರಾಷ್ಟ್ರಪತಿಯು ಮಾಡಿದ ಆದೇಶದ ಮೂಲಕ ಹೊರತು, ಅಂತಹ ಅಧ್ಯಕ್ಷನನ್ನು, ಉಪಾಧ್ಯಕ್ಷನನ್ನು ಅಥವಾ ಇತರ ಯಾವನೇ ಸದಸ್ಯನನ್ನು ಅವನ ಪದದಿಂದ ತೆಗೆದು ಹಾಕತಕ್ಕದ್ದಲ್ಲ.

(3) ಕೇಂದ್ರ ಸರ್ಕಾರವು (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದಂತೆ ಅಧ್ಯಕ್ಷನ, ಉಪಾಧ್ಯಕ್ಷನ ಅಥವಾ ಇತರ ಸದಸ್ಯನ ದುರ್ನಡತೆ ಅಥವಾ ಅಸಮರ್ಥತೆಯ ಬಗ್ಗೆ ತನಿಖೆ ನಡೆಸಲು ಅಗತ್ಯವಿರುವ ಕಾರ್ಯವಿಧಾನವನ್ನು ನಿಯಮಗಳ ಮೂಲಕ ನಿಯಂತ್ರಿಸಬಹುದು.

**10. ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಇತರ ಸದಸ್ಯರ ಸಂಬಳಗಳು ಮತ್ತು ಭತ್ಯೆಗಳು ಮತ್ತು ಇತರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು.**– ಅಧ್ಯಕ್ಷನಿಗೆ, ಉಪಾಧ್ಯಕ್ಷನಿಗೆ ಮತ್ತು ಇತರ ಸದಸ್ಯರಿಗೆ ಸಂದಾಯ ಮಾಡತಕ್ಕ ಸಂಬಳಗಳು ಮತ್ತು ಭತ್ಯಗಳು (ನಿವೃತ್ತಿ ವೇತನ, ಉಪದಾನ ಮತ್ತು ಇತರ ನಿವೃತ್ತಿ ಸೌಲಭ್ಯಗಳೂ ಸೇರಿದಂತೆ) ಮತ್ತು ಅವರ ಸೇವೆಯ ಇತರ ನಿಬಂಧನೆಗಳು ಮತ್ತು ಷರತ್ತುಗಳು ಕೇಂದ್ರ ಸರ್ಕಾರವು ನಿಯಮಿಸಬಹುದಾದಂತೆ ಇರತಕ್ಕದ್ದು:

ಪರಂತು, ಅಧ್ಯಕ್ಷನ, ಉಪಾಧ್ಯಕ್ಷನ ಅಥವಾ ಇತರ ಸದಸ್ಯನ ನೇಮಕದ ತರುವಾಯ ಅವರ ಸಂಬಳ ಮತ್ತು ಭತ್ಯಗಳನ್ನಾಗಲೀ ಅವರ ಸೇವೆಯ ಇತರ ನಿಬಂಧನೆ ಮತ್ತು ಷರತ್ತುಗಳನ್ನಾಗಲಿ ಅವರಿಗೆ ಅನಾನುಕೂಲವಾಗುವಂತೆ ವ್ಯತ್ಯಸ್ತಗೊಳಿಸತಕ್ಕದ್ದಲ್ಲ.

**11. ಅಧ್ಯಕ್ಷ ಮುಂತಾದವರು ಪದಧಾರಣ ಮಾಡಿರುವುದು ನಿಂತುಹೋದ ಮೇಲೆ, ಅಧ್ಯಕ್ಷ ಮುಂತಾದವರು ಪದಧಾರಣ ಮಾಡುವ ಬಗ್ಗೆ ಉಪಬಂಧ.**– ಕೇಂದ್ರ ಆಡಳಿತ ನ್ಯಾಯಾಧಿಕರಣದ ಅಧ್ಯಕ್ಷನು ಪದಧಾರಣ ಮಾಡಿರುವುದು ನಿಂತುಹೋದ ಮೇಲೆ,–

(ಎ) ಅವನು ಭಾರತ ಸರ್ಕಾರದಲ್ಲಾಗಲಿ ಅಥವಾ ರಾಜ್ಯ ಸರ್ಕಾರದಲ್ಲಾಗಲಿ ಪುನರ್ ನಿಯೋಜಿತನಾಗಲು ಅನರ್ಹನಾಗತಕ್ಕದ್ದು;

(ಬಿ) ರಾಜ್ಯ ಆಡಳಿತ ನ್ಯಾಯಾಧಿಕರಣದ ಅಥವಾ ಜಂಟಿ ಆಡಳಿತ ನ್ಯಾಯಾಧಿಕರಣದ ಅಧ್ಯಕ್ಷನು ಪದಧಾರಣ ಮಾಡುವುದು ನಿಂತುಹೋದ ಮೇಲೆ ಈ ಅಧಿನಿಯಮದ ಇತರ ಉಪಬಂಧಗಳಿಗೆ ಒಳಪಟ್ಟು, ಕೇಂದ್ರ ಆಡಳಿತ ನ್ಯಾಯಾಧಿಕರಣದ ಅಧ್ಯಕ್ಷನಾಗಿ ಅಥವಾ ಉಪಾಧ್ಯಕ್ಷನಾಗಿ ಅಥವಾ ಯಾವನೇ ಇತರ ಸದಸ್ಯನಾಗಿ ಅಥವಾ ಯಾವುದೇ ಇತರ ರಾಜ್ಯ ಆಡಳಿತ ನ್ಯಾಯಾಧಿಕರಣದ ಅಥವಾ ಜಂಟಿ ಆಡಳಿತ ನ್ಯಾಯಾಧಿಕರಣದ ಅಧ್ಯಕ್ಷನಾಗಿ ನೇಮಕಗೊಳ್ಳಲು

ಅರ್ಹನಾಗತಕ್ಕದ್ದು. ಆದರೆ, ಭಾರತ ಸರ್ಕಾರದಲ್ಲಾಗಲಿ ಅಥವಾ ರಾಜ್ಯ ಸರ್ಕಾರದಲ್ಲಾಗಲಿ ಯಾವುದೇ ಇತರ ನಿಯೋಜನೆಗೆ ಅರ್ಹನಾಗತಕ್ಕದ್ದಲ್ಲ;

(ಸಿ) ಕೇಂದ್ರ ಆಡಳಿತ ನ್ಯಾಯಾಧಿಕರಣದ ಉಪಾಧ್ಯಕ್ಷನು, ಪದಧಾರಣ ಮಾಡುವುದು ನಿಂತುಹೋದ ಮೇಲೆ ಈ ಅಧಿನಿಯಮದ ಇತರ ಉಪಬಂಧಗಳಿಗೆ ಒಳಪಟ್ಟು, ಆ ನ್ಯಾಯಾಧಿಕರಣದ ಅಧ್ಯಕ್ಷನಾಗಿ ಅಥವಾ ಯಾವುದೇ ರಾಜ್ಯ ಆಡಳಿತ ನ್ಯಾಯಾಧಿಕರಣದ ಅಥವಾ ಜಂಟಿ ಆಡಳಿತ ನ್ಯಾಯಾಧಿಕರಣದ ಅಧ್ಯಕ್ಷ ಅಥವಾ ಉಪಾಧ್ಯಕ್ಷನಾಗಿ ನೇಮಕಗೊಳ್ಳಲು ಅರ್ಹನಾಗಿರತಕ್ಕದ್ದು. ಆದರೆ, ಭಾರತ ಸರ್ಕಾರದಲ್ಲಾಗಲಿ ಅಥವಾ ರಾಜ್ಯ ಸರ್ಕಾರದಲ್ಲಾಗಲೀ ಯಾವುದೇ ಇತರ ನಿಯೋಜನೆಗೆ ಅರ್ಹನಾಗತಕ್ಕದ್ದಲ್ಲ;

(ಡಿ) ರಾಜ್ಯ ಆಡಳಿತ ನ್ಯಾಯಾಧಿಕರಣದ ಅಥವಾ ಜಂಟಿ ಆಡಳಿತ ನ್ಯಾಯಾಧಿಕರಣದ ಉಪಾಧ್ಯಕ್ಷನು ಪದಧಾರಣ ಮಾಡುವುದು ನಿಂತುಹೋದ ಮೇಲೆ ಈ ಅಧಿನಿಯಮದ ಇತರ ಉಪಬಂಧಗಳಿಗೆ ಒಳಪಟ್ಟು, ಆ ನ್ಯಾಯಾಧಿಕರಣದ ಅಧ್ಯಕ್ಷನಾಗಿ ಅಥವಾ ಕೇಂದ್ರ ಆಡಳಿತ ನ್ಯಾಯಾಧಿಕರಣದ ಅಥವಾ ಯಾವುದೇ ಇತರ ರಾಜ್ಯ ಆಡಳಿತ ನ್ಯಾಯಾಧಿಕರಣದ ಅಥವಾ ಜಂಟಿ ಆಡಳಿತ ನ್ಯಾಯಾಧಿಕರಣದ ಅಧ್ಯಕ್ಷನಾಗಿ ಅಥವಾ ಉಪಾಧ್ಯಕ್ಷನಾಗಿ ನೇಮಕಗೊಳ್ಳಲು ಅರ್ಹನಾಗತಕ್ಕದ್ದು. ಆದರೆ, ಭಾರತ ಸರ್ಕಾರದಲ್ಲಾಗಲಿ ಅಥವಾ ರಾಜ್ಯ ಸರ್ಕಾರದಲ್ಲಾಗಲಿ ಯಾವುದೇ ಇತರ ನಿಯೋಜನೆಗೆ ಅರ್ಹನಾಗತಕ್ಕದ್ದಲ್ಲ;

(ಇ) ಯಾವುದೇ ನ್ಯಾಯಾಧಿಕರಣದ ಸದಸ್ಯನು ಪದಧಾರಣ ಮಾಡುವುದು ನಿಂತುಹೋದ ಮೇಲೆ (ಅಧ್ಯಕ್ಷ ಅಥವಾ ಉಪಾಧ್ಯಕ್ಷನ ಹೊರತು) ಈ ಅಧಿನಿಯಮದ ಇತರ ಉಪಬಂಧಗಳಿಗೆ ಒಳಪಟ್ಟು ಅಂತಹ ನ್ಯಾಯಾಧಿಕರಣದ ಅಧ್ಯಕ್ಷನಾಗಿ ಅಥವಾ ಉಪಾಧ್ಯಕ್ಷನಾಗಿ ಅಥವಾ ಯಾವುದೇ ಇತರ ನ್ಯಾಯಾಧಿಕರಣದ ಅಧ್ಯಕ್ಷನಾಗಿ, ಉಪಾಧ್ಯಕ್ಷನಾಗಿ ಅಥವಾ ಇತರ ಸದಸ್ಯನಾಗಿ ನೇಮಕಗೊಳ್ಳಲು ಅರ್ಹನಾಗತಕ್ಕದ್ದು. ಆದರೆ, ಭಾರತ ಸರ್ಕಾರದಲ್ಲಾಗಲಿ ಅಥವಾ ರಾಜ್ಯ ಸರ್ಕಾರದಲ್ಲಾಗಲಿ ಯಾವುದೇ ಇತರ ನಿಯೋಜನೆಗೆ ಅರ್ಹನಾಗತಕ್ಕದ್ದಲ್ಲ;

(ಎಫ್) ಅಧ್ಯಕ್ಷನು, ಉಪಾಧ್ಯಕ್ಷನು ಅಥವಾ ಇತರ ಸದಸ್ಯನು ತಾನು ಅಧ್ಯಕ್ಷನಾಗಿದ್ದ, ಉಪಾಧ್ಯಕ್ಷನಾಗಿದ್ದ ಅಥವಾ ಇತರ ಸದಸ್ಯನಾಗಿದ್ದ ಯಾವುದೇ ನ್ಯಾಯಾಧಿಕರಣದ ಮುಂದೆ ಹಾಜರಾಗತಕ್ಕದ್ದಲ್ಲ, ಕಾರ್ಯನಿರ್ವಹಿಸತಕ್ಕದ್ದಲ್ಲ ಅಥವಾ ವಾದ ಮಾಡತಕ್ಕದ್ದಲ್ಲ.

**ವಿವರಣೆ.**- ಈ ಪ್ರಕರಣದ ಉದ್ದೇಶಗಳಿಗಾಗಿ, ಭಾರತ ಸರ್ಕಾರ ಅಥವಾ ರಾಜ್ಯ ಸರ್ಕಾರದಲ್ಲಿ ನಿಯೋಜನೆ ಎಂಬುದು ಭಾರತ ರಾಜ್ಯಕ್ಷೇತ್ರದೊಳಗಿನ ಯಾವುದೇ ಸ್ಥಳೀಯ ಪ್ರಾಧಿಕಾರದಲ್ಲಿರುವ ಅಥವಾ ಇತರ ಪ್ರಾಧಿಕಾರದಲ್ಲಿರುವ ಅಥವಾ ಭಾರತ ಸರ್ಕಾರದ ನಿಯಂತ್ರಣದಲ್ಲಿರುವ ಅಥವಾ ಸರ್ಕಾರದ ಒಡೆತನ ಅಥವಾ ನಿಯಂತ್ರಣದಲ್ಲಿರುವ ಯಾವುದೇ ನಿಗಮದಲ್ಲಿ ಅಥವಾ ಸೊಸೈಟಿಯಲ್ಲಿನ ನಿಯೋಜನೆಯನ್ನು ಒಳಗೊಳ್ಳುತ್ತದೆ.

**12. ಅಧ್ಯಕ್ಷನ ಆರ್ಥಿಕ ಮತ್ತು ಆಡಳಿತದ ಅಧಿಕಾರಗಳು.**- ಅಧ್ಯಕ್ಷನು, ಸಮುಚಿತ ಸರ್ಕಾರವು ರಚಿಸಿದ ನಿಯಮಗಳ ಮೂಲಕ ಅವನಲ್ಲಿ ನಿಹಿತಗೊಳಿಸಬಹುದಾದಂತಹ ಆರ್ಥಿಕ ಮತ್ತು ಆಡಳಿತ ಅಧಿಕಾರಗಳನ್ನು ನ್ಯಾಯಪೀಠಗಳ ಸಂಬಂಧದಲ್ಲಿ ಚಲಾಯಿಸತಕ್ಕದ್ದು:

ಪರಂತು, ಅಧ್ಯಕ್ಷನು ತನ್ನ ಆರ್ಥಿಕ ಮತ್ತು ಆಡಳಿತ ಅಧಿಕಾರಗಳ ಪೈಕಿ ತಾನು ಸೂಕ್ತವೆಂದು ಯೋಚಿಸಬಹುದಾದಂಥ ಅಧಿಕಾರಗಳನ್ನು ಉಪಾಧ್ಯಕ್ಷನಿಗೆ ಅಥವಾ ನ್ಯಾಯಾಧಿಕರಣದ ಯಾರೇ ಇತರ ಅಧಿಕಾರಿಗೆ ಪ್ರತ್ಯಾಯೋಜಿಸಲು ಅಧಿಕಾರ ಹೊಂದಿರತಕ್ಕದ್ದು. ಉಪಾಧ್ಯಕ್ಷನು ಅಥವಾ ಅಂತಹ ಅಧಿಕಾರಿಯು ಹಾಗೆ ಪ್ರತ್ಯಾಯೋಜಿಸಿದ ಅಧಿಕಾರಗಳನ್ನು ಚಲಾಯಿಸುವಾಗ ಅಧ್ಯಕ್ಷನ ನಿರ್ದೇಶನ, ನಿಯಂತ್ರಣ ಮತ್ತು ಮೇಲ್ವಿಚಾರಣೆಗೆ ಒಳಪಟ್ಟು ಕಾರ್ಯನಿರ್ವಹಿಸತಕ್ಕದ್ದು.

**13. ನ್ಯಾಯಾಧಿಕರಣದ ಸಿಬ್ಬಂದಿ.**- (1) ಸಮುಚಿತ ಸರ್ಕಾರವು, ನ್ಯಾಯಾಧಿಕರಣದ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಅದಕ್ಕೆ ಸಹಾಯ ಮಾಡಲು ಅಗತ್ಯವಾದ ಅಧಿಕಾರಿಗಳು ಮತ್ತು ಇತರ ನೌಕರರ ಸ್ವರೂಪ ಮತ್ತು ಪ್ರವರ್ಗಗಳನ್ನು ನಿರ್ಧರಿಸತಕ್ಕದ್ದು ಮತ್ತು ನ್ಯಾಯಾಧಿಕರಣಕ್ಕೆ ತಾನು ಸೂಕ್ತವೆಂದು ಯೋಚಿಸಬಹುದಾದಂತಹ ಅಧಿಕಾರಿಗಳನ್ನು ಮತ್ತು ಇತರ ನೌಕರರನ್ನು ಒದಗಿಸತಕ್ಕದ್ದು.

(1ಎ) ನ್ಯಾಯಾಧಿಕರಣದ ಅಧಿಕಾರಿಗಳು ಮತ್ತು ಇತರ ನೌಕರರು ಅಧ್ಯಕ್ಷರ ಸಾಮಾನ್ಯ ಅಧೀಕ್ಷಣೆಯಲ್ಲಿ ತಮ್ಮ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

(2) ನ್ಯಾಯಾಧಿಕರಣದ ಅಧಿಕಾರಿಗಳ ಮತ್ತು ಇತರ ನೌಕರರ ಸಂಬಳಗಳು ಮತ್ತು ಭತ್ಯೆಗಳು ಹಾಗೂ ಅವರ ಸೇವಾ ಷರತ್ತುಗಳು ಸಮುಚಿತ ಸರ್ಕಾರವು ರಚಿಸಿದ ನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂತೆ ಇರತಕ್ಕದ್ದು.

## ಅಧ್ಯಾಯ - III

## ನ್ಯಾಯಾಧಿಕರಣಗಳ ಅಧಿಕಾರ ವ್ಯಾಪ್ತಿ, ಅಧಿಕಾರಗಳು ಮತ್ತು ಪ್ರಾಧಿಕಾರ

**14. ಕೇಂದ್ರ ಆಡಳಿತ ನ್ಯಾಯಾಧಿಕರಣದ ಅಧಿಕಾರ ವ್ಯಾಪ್ತಿ, ಅಧಿಕಾರಗಳು ಮತ್ತು ಪ್ರಾಧಿಕಾರ.**- (1) ಈ ಅಧಿನಿಯಮದಲ್ಲಿ ಅನ್ಯಥಾ ವ್ಯಕ್ತವಾಗಿ ಉಪಬಂಧಿಸಿರುವುದನ್ನು ಉಳಿದು, ಕೇಂದ್ರ ಆಡಳಿತ ನ್ಯಾಯಾಧಿಕರಣವು ಗೊತ್ತುಪಡಿಸಲಾದ ದಿನದಂದು ಮತ್ತು ಆ ದಿನದಿಂದ ಎಲ್ಲಾ ನ್ಯಾಯಾಲಯಗಳು (ಸರ್ವೋಚ್ಚ ನ್ಯಾಯಾಲಯವನ್ನು ಹೊರತುಪಡಿಸಿ) ಆ ದಿನದ ನಿಕಟಪೂರ್ವದಲ್ಲಿ ಈ ಕೆಳಕಂಡ ವಿಷಯಗಳ ಸಂಬಂಧದಲ್ಲಿ ಚಲಾಯಿಸಬಹುದಾಗಿದ್ದ ಎಲ್ಲ ಅಧಿಕಾರ ವ್ಯಾಪ್ತಿಯನ್ನು, ಅಧಿಕಾರವನ್ನು ಮತ್ತು ಪ್ರಾಧಿಕಾರವನ್ನು ಚಲಾಯಿಸತಕ್ಕದ್ದು,-

(ಎ) ಯಾವುದೇ ಅಖಿಲ ಭಾರತ ಸೇವೆಗೆ ಅಥವಾ ಒಕ್ಕೂಟದ ಯಾವುದೇ ಸಿವಿಲ್ ಸೇವೆಗೆ ಅಥವಾ ಒಕ್ಕೂಟದಲ್ಲಿನ ಒಂದು ಸಿವಿಲ್ ಹುದ್ದೆಗೆ ಅಥವಾ ರಕ್ಷಣೆಗೆ ಸಂಬಂಧಪಟ್ಟ ಅಥವಾ ರಕ್ಷಣಾ ಸೇವೆಗಳ ಒಂದು ಹುದ್ದೆಗೆ - ಈ ಎರಡೂ ಸಂದರ್ಭಗಳಲ್ಲಿ- ಅಸೈನಿಕನಿಂದ ಭರ್ತಿ ಮಾಡತಕ್ಕ ಹುದ್ದೆಗೆ ಮಾಡಲಾದ ನೌಕರಿಭರ್ತಿ ಅಥವಾ ಆ ನೌಕರಿಭರ್ತಿಗೆ ಸಂಬಂಧಪಡುವ ವಿಷಯಗಳು;

(ಬಿ) ಈ ಮುಂದಿನವುಗಳಿಗೆ ಸಂಬಂಧಿಸಿದ ಎಲ್ಲ ಸೇವಾ ವಿಷಯಗಳು,-

(i) ಯಾವುದೇ ಅಖಿಲ ಭಾರತ ಸೇವೆಯ ಸದಸ್ಯ; ಅಥವಾ

(ii) ಅಖಿಲ ಭಾರತ ಸೇವೆಯ ಸದಸ್ಯನಾಗಿರದ ಅಥವಾ ಒಕ್ಕೂಟದ ಯಾವುದೇ ಸಿವಿಲ್ ಸೇವೆಗೆ ಅಥವಾ ಒಕ್ಕೂಟದಲ್ಲಿ ಯಾವುದೇ ಸಿವಿಲ್ ಹುದ್ದೆಗೆ ನೇಮಕಗೊಂಡ ಮತ್ತು (ಸಿ) ಖಂಡದಲ್ಲಿ ಉಲ್ಲೇಖಿಸಿದ ಒಬ್ಬ ವ್ಯಕ್ತಿಯಾಗಿರದ ವ್ಯಕ್ತಿ; ಅಥವಾ

(iii) ಅಖಿಲ ಭಾರತ ಸೇವೆಯ ಸದಸ್ಯನಾಗಿರದ ಅಥವಾ ಯಾವುವೇ ರಕ್ಷಣಾ ಸೇವೆಗಳಿಗೆ ಅಥವಾ ರಕ್ಷಣೆಗೆ ಸಂಬಂಧಿಸಿದ ಹುದ್ದೆಗೆ ನೇಮಕಗೊಂಡ ಮತ್ತು (ಸಿ) ಖಂಡದಲ್ಲಿ ಉಲ್ಲೇಖಿಸಿದ ವ್ಯಕ್ತಿಯಾಗಿರದ ಒಬ್ಬ ಅಸೈನಿಕ

- ಮತ್ತು ಒಕ್ಕೂಟದ ಅಥವಾ ಯಾವುದೇ ರಾಜ್ಯದ ಅಥವಾ ಭಾರತದ ರಾಜ್ಯಕ್ಷೇತ್ರದೊಳಗಿನ ಯಾವುದೇ ಸ್ಥಳೀಯ ಅಥವಾ ಇತರ ಪ್ರಾಧಿಕಾರದ ಅಥವಾ ಭಾರತ ಸರ್ಕಾರದ ನಿಯಂತ್ರಣದಲ್ಲಿರುವ ಅಥವಾ ಸರ್ಕಾರದ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಯಾವುದೇ ನಿಗಮದ ಅಥವಾ ಸೊಸೈಟಿಯ ವ್ಯವಹಾರಗಳಿಗೆ ಸಂಬಂಧಿಸಿದ ಅಂತಹ ಸದಸ್ಯನ, ವ್ಯಕ್ತಿಯ ಅಥವಾ ಅಸೈನಿಕನ ಸೇವೆಗೆ ಸಂಬಂಧಿಸಿದ ಸೇವಾ ವಿಷಯಗಳು;

(ಸಿ) ಒಕ್ಕೂಟ ವ್ಯವಹಾರಗಳ ಸಂಬಂಧದಲ್ಲಿ (ಬಿ) ಖಂಡದ (ii) ಅಥವಾ (iii)ನೇ ಉಪಖಂಡದಲ್ಲಿ ಉಲ್ಲೇಖಿಸಲಾದ ಯಾವುದೇ ಸೇವೆಗೆ ಅಥವಾ ಹುದ್ದೆಗೆ ನೇಮಕ ಮಾಡಲು ರಾಜ್ಯ ಸರ್ಕಾರವು ಅಥವಾ ಯಾವುದೇ ಸ್ಥಳೀಯ ಅಥವಾ ಇತರ ಪ್ರಾಧಿಕಾರವು ಅಥವಾ ಯಾವುದೇ ನಿಗಮವು ಅಥವಾ ಸೊಸೈಟಿಯು ಅಥವಾ ಇತರ ನಿಕಾಯವು ಯಾವ ವ್ಯಕ್ತಿಯ ಸೇವೆಗಳನ್ನು ಕೇಂದ್ರ ಸರ್ಕಾರಕ್ಕೆ ಒಪ್ಪಿಸಿದೆಯೋ ಮತ್ತು ಯಾವನನ್ನು ಆ ಸೇವೆಗೆ ಅಥವಾ ಹುದ್ದೆಗೆ ನೇಮಕ ಮಾಡಲಾಗಿದೆಯೋ ಆ ವ್ಯಕ್ತಿಯ ಸೇವೆಗೆ ಸಂಬಂಧಪಟ್ಟ ಎಲ್ಲ ಸೇವಾ ವಿಷಯಗಳು.

**ವಿವರಣೆ.**- ಸಂದೇಹಗಳ ನಿವಾರಣೆಗಾಗಿ, ಈ ಉಪಪ್ರಕರಣದಲ್ಲಿ "ಒಕ್ಕೂಟ" ಎಂಬುದಕ್ಕೆ ಮಾಡಲಾಗಿರುವ ಉಲ್ಲೇಖಗಳು ಒಕ್ಕೂಟ ರಾಜ್ಯಕ್ಷೇತ್ರಕ್ಕೆ ಮಾಡಿರುವ ಉಲ್ಲೇಖಗಳನ್ನು ಸಹ ಒಳಗೊಂಡಿರುವುದಾಗಿ ಅರ್ಥೈಸತಕ್ಕದ್ದೆಂದು ಈ ಮೂಲಕ ಘೋಷಿಸಲಾಗಿದೆ.

(2) ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ, ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂತಹ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ, (3)ನೇ ಉಪಪ್ರಕರಣದ ಉಪಬಂಧಗಳನ್ನು ಭಾರತ ರಾಜ್ಯಕ್ಷೇತ್ರದೊಳಗಿರುವ ಅಥವಾ ಭಾರತ ಸರ್ಕಾರದ ನಿಯಂತ್ರಣದಲ್ಲಿರುವ ಸ್ಥಳೀಯ ಅಥವಾ ಇತರ ಪ್ರಾಧಿಕಾರಗಳಿಗೆ ಮತ್ತು ಯಾವುದೇ ರಾಜ್ಯ ಸರ್ಕಾರದ ನಿಯಂತ್ರಣದಲ್ಲಿರುವ ಅಥವಾ ಒಡೆತನದಲ್ಲಿರುವ ಸ್ಥಳೀಯ ಅಥವಾ ಇತರ ಪ್ರಾಧಿಕಾರ ಅಥವಾ ನಿಗಮ ಅಥವಾ ಸೊಸೈಟಿಯಾಗಿಲ್ಲದ, ಕೇಂದ್ರ ಸರ್ಕಾರದ ಒಡೆತನ ಅಥವಾ ನಿಯಂತ್ರಣದಲ್ಲಿರುವ ನಿಗಮಗಳಿಗೆ ಅಥವಾ ಸೊಸೈಟಿಗಳಿಗೆ ಅನ್ವಯಿಸಬಹುದು:

ಪರಂತು, ಕೇಂದ್ರ ಸರ್ಕಾರವು, ಈ ಅಧಿನಿಯಮದ ಮೂಲಕ ರೂಪಿತವಾದಂಥ ಯೋಜನೆಗೆ ಅನುಗುಣವಾದ ಪರಿವರ್ತನೆಗೆ ಅನುಕೂಲ ಕಲ್ಪಿಸುವ ಉದ್ದೇಶಕ್ಕಾಗಿ ಸ್ಥಳೀಯ ಅಥವಾ ಇತರ ಪ್ರಾಧಿಕಾರಗಳ ಅಥವಾ ನಿಗಮಗಳ

ಅಥವಾ ಸೊಸೈಟಿಗಳ ಯಾವುದೇ ವರ್ಗಗಳ ಸಂಬಂಧದಲ್ಲಿ ಅಥವಾ ಅವುಗಳ ಯಾವುದೇ ವರ್ಗದಲ್ಲಿ ಬರುವ ಬೇರೆಬೇರೆ ಪ್ರವರ್ಗಗಳ ಸಂಬಂಧದಲ್ಲಿ, ಈ ಉಪಪ್ರಕರಣದ ಮೇರೆಗೆ ಬೇರೆ ಬೇರೆ ದಿನಾಂಕಗಳನ್ನು ನಿರ್ದಿಷ್ಟಪಡಿಸುವುದು ವಿಹಿತವೆಂದು ಪರಿಗಣಿಸಿದರೆ, ಅದು ಹಾಗೆ ಮಾಡಬಹುದು.

(3) ಈ ಅಧಿನಿಯಮದಲ್ಲಿ ಅನ್ಯಥಾ ವ್ಯಕ್ತವಾಗಿ ಉಪಬಂಧಿಸಿರುವುದನ್ನುಳಿದು, ಕೇಂದ್ರ ಆಡಳಿತ ನ್ಯಾಯಾಧಿಕರಣವು ಕೂಡ, ಈ ಉಪಪ್ರಕರಣದ ಉಪಬಂಧಗಳು ಯಾವುದೇ ಸ್ಥಳೀಯ ಅಥವಾ ಇತರ ಪ್ರಾಧಿಕಾರಕ್ಕೆ ಅಥವಾ ನಿಗಮ ಅಥವಾ ಸೊಸೈಟಿಗೆ ಅನ್ವಯವಾಗುವ ದಿನದಂದು ಮತ್ತು ಆ ದಿನದಿಂದ, ಎಲ್ಲ ನ್ಯಾಯಾಲಯಗಳು (ಸರ್ವೋಚ್ಚ ನ್ಯಾಯಾಲಯದ ಹೊರತು) ಆ ದಿನದ ನಿಕಟಪೂರ್ವದಲ್ಲಿ ಈ ಕೆಳಕಂಡವುಗಳ ಸಂಬಂಧದಲ್ಲಿ ಚಲಾಯಿಸಬಹುದಾಗಿದ್ದ ಎಲ್ಲ ಅಧಿಕಾರ ವ್ಯಾಪ್ತಿಯನ್ನು, ಅಧಿಕಾರಗಳನ್ನು ಮತ್ತು ಪ್ರಾಧಿಕಾರಗಳನ್ನು ಚಲಾಯಿಸತಕ್ಕದ್ದು,-

(ಎ) ಅಂತಹ ಸ್ಥಳೀಯ ಅಥವಾ ಇತರ ಪ್ರಾಧಿಕಾರದ ಅಥವಾ ನಿಗಮದ ಅಥವಾ ಸೊಸೈಟಿಯ ವ್ಯವಹಾರಗಳ ಸಂಬಂಧದಲ್ಲಿನ ಯಾವುದೇ ಸೇವೆಗೆ ಅಥವಾ ಹುದ್ದೆಗೆ ನೌಕರಿಭರ್ತಿ ಮತ್ತು ನೌಕರಿಭರ್ತಿಗೆ ಸಂಬಂಧಿಸಿದ ವಿಷಯಗಳು; ಮತ್ತು

(ಬಿ) ಅಂತಹ ಸ್ಥಳೀಯ ಅಥವಾ ಇತರ ಪ್ರಾಧಿಕಾರದ ಅಥವಾ ನಿಗಮದ ಅಥವಾ ಸೊಸೈಟಿಯ ವ್ಯವಹಾರಗಳ ಸಂಬಂಧದಲ್ಲಿ ಯಾವುದೇ ಸೇವೆಗೆ ಅಥವಾ ಹುದ್ದೆಗೆ ನೇಮಕಗೊಂಡ, ಮತ್ತು (1)ನೇ ಉಪಪ್ರಕರಣದ (ಎ) ಖಂಡ ಅಥವಾ (ಬಿ) ಖಂಡದಲ್ಲಿ ಉಲ್ಲೇಖಿಸಲಾದ ವ್ಯಕ್ತಿಯಾಗಿರದಂಥ ವ್ಯಕ್ತಿಗೆ ಮತ್ತು ಅಂಥ ವ್ಯವಹಾರಗಳ ಸಂಬಂಧದಲ್ಲಿ ಅಂತಹ ವ್ಯಕ್ತಿಯ ಸೇವೆಗೆ ಸಂಬಂಧಿಸಿದ ಎಲ್ಲ ಸೇವಾ ವಿಷಯಗಳು.

**15. ರಾಜ್ಯ ಆಡಳಿತ ನ್ಯಾಯಾಧಿಕರಣದ ಅಧಿಕಾರ ವ್ಯಾಪ್ತಿ, ಅಧಿಕಾರ ಮತ್ತು ಪ್ರಾಧಿಕಾರ.**- (1) ಈ ಅಧಿನಿಯಮದಲ್ಲಿ ಅನ್ಯಥಾ ವ್ಯಕ್ತವಾಗಿ ಉಪಬಂಧಿಸಿರುವುದನ್ನು ಉಳಿದು ರಾಜ್ಯದ ಆಡಳಿತ ನ್ಯಾಯಾಧಿಕರಣವು, ಗೊತ್ತುಪಡಿಸಲಾದ ದಿನದಂದು ಮತ್ತು ಆ ದಿನದಿಂದ ಎಲ್ಲ ನ್ಯಾಯಾಲಯಗಳು (ಸರ್ವೋಚ್ಚ ನ್ಯಾಯಾಲಯದ ಹೊರತು) ಆ ದಿನದ ನಿಕಟಪೂರ್ವದಲ್ಲಿ ಈ ಕೆಳಕಂಡವುಗಳ ಸಂಬಂಧದಲ್ಲಿ ಚಲಾಯಿಸಬಹುದಾಗಿದ್ದ ಎಲ್ಲ ಅಧಿಕಾರ ವ್ಯಾಪ್ತಿಯನ್ನು, ಅಧಿಕಾರಗಳನ್ನು ಮತ್ತು ಪ್ರಾಧಿಕಾರವನ್ನು ಚಲಾಯಿಸತಕ್ಕದ್ದು,-

(ಎ) ರಾಜ್ಯದ ಯಾವುದೇ ಸಿವಿಲ್ ಸೇವೆಗೆ ಅಥವಾ ರಾಜ್ಯದ ಅಧೀನದಲ್ಲಿರುವ ಯಾವುದೇ ಸಿವಿಲ್ ಹುದ್ದೆಗೆ ನೌಕರಿಭರ್ತಿ ಮತ್ತು ಆ ನೌಕರಿಭರ್ತಿಗೆ ಸಂಬಂಧಪಡುವ ವಿಷಯಗಳು;

(ಬಿ) ರಾಜ್ಯದ ಯಾವುದೇ ಸಿವಿಲ್ ಸೇವೆಗೆ ಅಥವಾ ರಾಜ್ಯದ ಅಧೀನದಲ್ಲಿರುವ ಯಾವುದೇ ಸಿವಿಲ್ ಹುದ್ದೆಗೆ ನೇಮಕಗೊಂಡಿರುವ ಮತ್ತು ಈ ಉಪಪ್ರಕರಣದ (ಸಿ) ಖಂಡದಲ್ಲಿ ಉಲ್ಲೇಖಿಸಲಾದ ವ್ಯಕ್ತಿಯಾಗಿರದ ಅಥವಾ 14ನೇ ಪ್ರಕರಣದ (1)ನೇ ಉಪಪ್ರಕರಣದ (ಬಿ) ಖಂಡದಲ್ಲಿ ಉಲ್ಲೇಖಿಸಲಾದ ಸದಸ್ಯನಲ್ಲದ, ವ್ಯಕ್ತಿಯಾಗಿಲ್ಲದ ಅಥವಾ ಅಸೈನಿಕನಲ್ಲದ ವ್ಯಕ್ತಿಗೆ ಸಂಬಂಧಿಸಿದ ಎಲ್ಲ ಸೇವಾ ವಿಷಯಗಳು ಮತ್ತು ರಾಜ್ಯದ ಅಥವಾ ರಾಜ್ಯ ಸರ್ಕಾರದ ನಿಯಂತ್ರಣದಲ್ಲಿರುವ ಯಾವುದೇ ಸ್ಥಳೀಯ ಅಥವಾ ಇತರ ಪ್ರಾಧಿಕಾರದ ಅಥವಾ ರಾಜ್ಯ ಸರ್ಕಾರದ ಒಡೆತನದಲ್ಲಿರುವ ಅಥವಾ ಅದರ ನಿಯಂತ್ರಣದಲ್ಲಿರುವ ಯಾವುದೇ ನಿಗಮದ ಅಥವಾ ಸೊಸೈಟಿಯ ವ್ಯವಹಾರಗಳಿಗೆ ಸಂಬಂಧಿಸಿದಲ್ಲಿ ಅಂತಹ ವ್ಯಕ್ತಿಯ ಸೇವೆಗೆ ಸಂಬಂಧಿಸಿದ ಎಲ್ಲ ಸೇವಾ ವಿಷಯಗಳು;

(ಸಿ) ರಾಜ್ಯದ ವ್ಯವಹಾರಗಳ ಸಂಬಂಧದಲ್ಲಿ (ಬಿ) ಖಂಡದಲ್ಲಿ ಉಲ್ಲೇಖಿಸಲಾದ ಯಾವುದೇ ಸೇವೆಗೆ ಅಥವಾ ಹುದ್ದೆಗೆ ನೇಮಕ ಮಾಡಲು ಅಂಥ ಯಾವುದೇ ಸ್ಥಳೀಯ ಅಥವಾ ಇತರ ಪ್ರಾಧಿಕಾರವು ಅಥವಾ ನಿಗಮವು ಅಥವಾ ಸೊಸೈಟಿಯು ಅಥವಾ ರಾಜ್ಯ ಸರ್ಕಾರದ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಇತರ ನಿಕಾಯವು ಯಾವ ವ್ಯಕ್ತಿಯ ಸೇವೆಗಳನ್ನು ರಾಜ್ಯ ಸರ್ಕಾರಕ್ಕೆ ಒಪ್ಪಿಸಿದೆಯೋ ಮತ್ತು ಯಾವನನ್ನು ಆ ಸೇವೆಗೆ ಅಥವಾ ಹುದ್ದೆಗೆ ನೇಮಕ ಮಾಡಲಾಗಿದೆಯೋ ಆ ವ್ಯಕ್ತಿಯ ಸೇವೆಗೆ ಸಂಬಂಧಪಟ್ಟ ಎಲ್ಲ ವಿಷಯಗಳು.

(2) ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ, ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂತಹ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ ಸ್ಥಳೀಯ ಪ್ರಾಧಿಕಾರಗಳಿಗೆ ಅಥವಾ ಇತರ ಪ್ರಾಧಿಕಾರಗಳಿಗೆ ಮತ್ತು ರಾಜ್ಯ ಸರ್ಕಾರದ ನಿಯಂತ್ರಣದಲ್ಲಿರುವ ಅಥವಾ ಒಡೆತನದಲ್ಲಿರುವ ನಿಗಮಗಳಿಗೆ ಅಥವಾ ಸೊಸೈಟಿಗಳಿಗೆ (3)ನೇ ಉಪಪ್ರಕರಣದ ಉಪಬಂಧಗಳನ್ನು ಅನ್ವಯಿಸಬಹುದು:

ಪರಂತು, ರಾಜ್ಯ ಸರ್ಕಾರವು, ಈ ಅಧಿನಿಯಮದ ಮೂಲಕ ರೂಪಿತವಾದಂಥ ಸ್ಕೀಮಿಗೆ ಅನುಗುಣವಾದ ಪರಿವರ್ತನೆಯನ್ನು ಸುಗಮಗೊಳಿಸುವ ಉದ್ದೇಶಕ್ಕಾಗಿ ಸ್ಥಳೀಯ ಅಥವಾ ಇತರ ಪ್ರಾಧಿಕಾರಗಳ ಅಥವಾ ನಿಗಮಗಳ ಅಥವಾ ಸೊಸೈಟಿಗಳ ಯಾವುದೇ ವರ್ಗಗಳ ಸಂಬಂಧದಲ್ಲಿ ಅಥವಾ ಅವುಗಳ ಯಾವುದೇ ವರ್ಗದಲ್ಲಿ ಬರುವ ಬೇರೆ

ಬೇರೆ ಪ್ರವರ್ಗಗಳ ಸಂಬಂಧದಲ್ಲಿ ಈ ಉಪಪ್ರಕರಣದ ಅಡಿಯಲ್ಲಿ ಬೇರೆ ಬೇರೆ ದಿನಾಂಕಗಳನ್ನು ನಿರ್ದಿಷ್ಟಪಡಿಸುವುದು ವಿಹಿತವೆಂದು ಪರಿಗಣಿಸಿದರೆ, ಹಾಗೆ ಮಾಡಬಹುದು.

(3) ಈ ಅಧಿನಿಯಮದಲ್ಲಿ ಅನ್ಯಥಾ ವ್ಯಕ್ತವಾಗಿ ಉಪಬಂಧಿಸಿರುವುದನ್ನುಳಿದು, ರಾಜ್ಯ ಆಡಳಿತ ನ್ಯಾಯಾಧಿಕರಣವು ಕೂಡ ಈ ಉಪಪ್ರಕರಣದ ಉಪಬಂಧಗಳು, ಯಾವುದೇ ಸ್ಥಳೀಯ ಅಥವಾ ಇತರ ಪ್ರಾಧಿಕಾರಕ್ಕೆ ಅಥವಾ ನಿಗಮ ಅಥವಾ ಸೊಸೈಟಿಗೆ ಅನ್ವಯವಾಗುವ ದಿನದಂದು ಮತ್ತು ಆ ದಿನದಿಂದ ಎಲ್ಲ ನ್ಯಾಯಾಲಯಗಳು (ಸರ್ವೋಚ್ಚ ನ್ಯಾಯಾಲಯದ ಹೊರತು) ಆ ದಿನದ ನಿಕಟಪೂರ್ವದಲ್ಲಿ ಈ ಮುಂದಿನವುಗಳ ಸಂಬಂಧದಲ್ಲಿ ಚಲಾಯಿಸಬಹುದಾಗಿದ್ದ ಎಲ್ಲ ಅಧಿಕಾರ ವ್ಯಾಪ್ತಿಯನ್ನು, ಅಧಿಕಾರಗಳನ್ನು ಮತ್ತು ಪ್ರಾಧಿಕಾರವನ್ನು ಚಲಾಯಿಸತಕ್ಕದ್ದು.

(ಎ) ಅಂತಹ ಸ್ಥಳೀಯ ಅಥವಾ ಇತರ ಪ್ರಾಧಿಕಾರದ ಅಥವಾ ನಿಗಮದ ಅಥವಾ ಸೊಸೈಟಿಯ ವ್ಯವಹಾರಗಳ ಸಂಬಂಧದಲ್ಲಿನ ಯಾವುದೇ ಸೇವೆಗೆ ಅಥವಾ ಹುದ್ದೆಗೆ ನೌಕರಿಭರ್ತಿ ಮತ್ತು ನೌಕರಿಭರ್ತಿಗೆ ಸಂಬಂಧಿಸಿದ ವಿಷಯಗಳು; ಮತ್ತು

(ಬಿ) ಅಂತಹ ಸ್ಥಳೀಯ ಅಥವಾ ಇತರ ಪ್ರಾಧಿಕಾರದ ಅಥವಾ ನಿಗಮದ ಅಥವಾ ಸೊಸೈಟಿಯ ವ್ಯವಹರಣೆಗಳ ಸಂಬಂಧದಲ್ಲಿ ಯಾವುದೇ ಸೇವೆಗೆ ಅಥವಾ ಹುದ್ದೆಗೆ ನೇಮಕಗೊಂಡ ಮತ್ತು ಈ ಪ್ರಕರಣದ (1)ನೇ ಉಪಪ್ರಕರಣದ (ಬಿ) ಖಂಡದಲ್ಲಿ ಉಲ್ಲೇಖಿತವಾದ ವ್ಯಕ್ತಿಯಾಗಿರದಂಥ ಅಥವಾ 14ನೇ ಪ್ರಕರಣದ (1)ನೇ ಉಪಪ್ರಕರಣದ (ಬಿ) ಖಂಡದಲ್ಲಿ ಉಲ್ಲೇಖಿತವಾದ ಸದಸ್ಯ, ವ್ಯಕ್ತಿ ಅಥವಾ ಅಸೈನಿಕ ಆಗಿರದಂಥ ವ್ಯಕ್ತಿಗೆ ಮತ್ತು ಅಂತಹ ವ್ಯವಹಾರಗಳ ಸಂಬಂಧದಲ್ಲಿ ಅಂತಹ ವ್ಯಕ್ತಿಯ ಸೇವೆಗೆ ಸಂಬಂಧಿಸಿದ ಎಲ್ಲ ಸೇವಾ ವಿಷಯಗಳು.

(4) ಸಂದೇಹಗಳ ನಿವಾರಣೆಗಾಗಿ ಯಾವ ವಿಷಯದ ಸಂಬಂಧದಲ್ಲಿ ಕೇಂದ್ರ ಆಡಳಿತ ನ್ಯಾಯಾಧಿಕರಣದ ಅಧಿಕಾರ ವ್ಯಾಪ್ತಿಯು, ಅಧಿಕಾರಗಳು ಮತ್ತು ಪ್ರಾಧಿಕಾರವು ವ್ಯಾಪ್ತವಾಗುವುದೋ ಅಥವಾ ಅವುಗಳನ್ನು ಚಲಾಯಿಸಬಹುದೋ ಆ ಯಾವುದೇ ವಿಷಯದ ಸಂಬಂಧದಲ್ಲಿ ರಾಜ್ಯ ಆಡಳಿತ ನ್ಯಾಯಾಧಿಕರಣದ ಅಧಿಕಾರ ವ್ಯಾಪ್ತಿಯು, ಅಧಿಕಾರಗಳು ಮತ್ತು ಪ್ರಾಧಿಕಾರಗಳು ವ್ಯಾಪ್ತವಾಗತಕ್ಕದ್ದಲ್ಲವೆಂದು ಅಥವಾ ಅವುಗಳನ್ನು ಚಲಾಯಿಸತಕ್ಕದ್ದಲ್ಲವೆಂದು ಈ ಮೂಲಕ ಘೋಷಿಸಲಾಗಿದೆ.

**16. ಜಂಟಿ ಆಡಳಿತ ನ್ಯಾಯಾಧಿಕರಣದ ಅಧಿಕಾರ ವ್ಯಾಪ್ತಿ, ಅಧಿಕಾರಗಳು ಮತ್ತು ಪ್ರಾಧಿಕಾರ.**- ಎರಡು ಅಥವಾ ಹೆಚ್ಚು ರಾಜ್ಯಗಳ ಜಂಟಿ ಆಡಳಿತ ನ್ಯಾಯಾಧಿಕರಣವು ಅಂತಹ ರಾಜ್ಯಗಳ ಆಡಳಿತ ನ್ಯಾಯಾಧಿಕರಣಗಳು ಚಲಾಯಿಸಬಹುದಾದ ಎಲ್ಲ ಅಧಿಕಾರ ವ್ಯಾಪ್ತಿಯನ್ನು, ಅಧಿಕಾರಗಳನ್ನು ಮತ್ತು ಪ್ರಾಧಿಕಾರವನ್ನು ಚಲಾಯಿಸತಕ್ಕದ್ದು.

**17. ನ್ಯಾಯಾಧಿಕರಣದ ನಿಂದನೆಗಾಗಿ ದಂಡಿಸುವ ಅಧಿಕಾರ.**- ನ್ಯಾಯಾಧಿಕರಣದ ನಿಂದನೆಯ ಸಂದರ್ಭದಲ್ಲಿ ಅದು ಉಚ್ಚ ನ್ಯಾಯಾಲಯವು ಹೊಂದಿರುವಂಥವೇ ಮತ್ತು ಚಲಾಯಿಸುವಂಥವೇ ಅಧಿಕಾರ ವ್ಯಾಪ್ತಿಯನ್ನು, ಅಧಿಕಾರಗಳನ್ನು ಮತ್ತು ಪ್ರಾಧಿಕಾರವನ್ನು ಹೊಂದಿರತಕ್ಕದ್ದು ಮತ್ತು ಚಲಾಯಿಸತಕ್ಕದ್ದು ಮತ್ತು ಈ ಉದ್ದೇಶಕ್ಕಾಗಿ ನ್ಯಾಯಾಲಯಗಳ ನಿಂದನೆ ಅಧಿನಿಯಮ, 1971 (1971ರ 70) ಇದರ ಉಪಬಂಧಗಳು ಈ ಮುಂದಿನ ಮಾರ್ಪಾಡುಗಳಿಗೆ ಒಳಪಟ್ಟು ಪರಿಣಾಮಕಾರಿಯಾಗತಕ್ಕದ್ದು,-

(ಎ) ಸದರಿ ಅಧಿನಿಯಮದಲ್ಲಿ ಉಚ್ಚ ನ್ಯಾಯಾಲಯದ ಸಂಬಂಧದಲ್ಲಿ ಮಾಡಲಾದ ಉಲ್ಲೇಖಗಳನ್ನು ಅಂತಹ ನ್ಯಾಯಾಧಿಕರಣಕ್ಕೆ ಮಾಡಲಾದ ಉಲ್ಲೇಖವೆಂದು ಅರ್ಥೈಸತಕ್ಕದ್ದು;

(ಬಿ) ಸದರಿ ಅಧಿನಿಯಮದ 15ನೇ ಪ್ರಕರಣದಲ್ಲಿ ಅಡ್ವೋಕೇಟ್ ಜನರಲ್‌ರ ಸಂಬಂಧದಲ್ಲಿ ಮಾಡಲಾದ ಉಲ್ಲೇಖಗಳನ್ನು,-

(i) ಕೇಂದ್ರ ಆಡಳಿತ ನ್ಯಾಯಾಧಿಕರಣಕ್ಕೆ ಸಂಬಂಧಪಟ್ಟಂತೆ, ಅಟಾರ್ನಿ ಜನರಲ್ಲನಿಗೆ ಅಥವಾ ಸಾಲಿಸಿಟರ್ ಜನರಲ್ಲನಿಗೆ ಅಥವಾ ಅಡಿಷನಲ್ ಸಾಲಿಸಿಟರ್ ಜನರಲ್ಲನಿಗೆ ಮಾಡಲಾದ ಉಲ್ಲೇಖವೆಂದು ಅರ್ಥೈಸತಕ್ಕದ್ದು; ಮತ್ತು

(ii) ಒಂದು ರಾಜ್ಯ ಆಡಳಿತ ನ್ಯಾಯಾಧಿಕರಣದ ಅಥವಾ ಎರಡು ಅಥವಾ ಹೆಚ್ಚು ರಾಜ್ಯಗಳ ಜಂಟಿ ಆಡಳಿತ ನ್ಯಾಯಾಧಿಕರಣದ ಸಂಬಂಧದಲ್ಲಿ, ಆ ರಾಜ್ಯದ ಅಥವಾ ಅಂತಹ ನ್ಯಾಯಾಧಿಕರಣವನ್ನು ಸ್ಥಾಪಿಸಲಾದ ಯಾವುದೇ ರಾಜ್ಯದ ಅಡ್ವೋಕೇಟ್ ಜನರಲ್ಲನಿಗೆ ಮಾಡಲಾದ ಉಲ್ಲೇಖವೆಂದು ಅರ್ಥೈಸತಕ್ಕದ್ದು.

**18. ನ್ಯಾಯಪೀಠಗಳಿಗೆ ವ್ಯವಹಾರದ ಹಂಚಿಕೆ.**- (1) ನ್ಯಾಯಾಧಿಕರಣದ ಯಾವುವೇ ನ್ಯಾಯಪೀಠಗಳನ್ನು ರಚಿಸಿರುವಲ್ಲಿ, ಸಮುಚಿತ ಸರ್ಕಾರವು, ಆ ನ್ಯಾಯಪೀಠಗಳಿಗೆ ನ್ಯಾಯಾಧಿಕರಣದ ವ್ಯವಹಾರವನ್ನು ಹಂಚಿಕೆ ಮಾಡುವ ಬಗ್ಗೆ ಕಾಲಕಾಲಕ್ಕೆ ಅಧಿಸೂಚನೆಯ ಮೂಲಕ ಉಪಬಂಧ ಕಲ್ಪಿಸಬಹುದು ಮತ್ತು ಪ್ರತಿಯೊಂದು ಪೀಠವು ವ್ಯವಹರಿಸಬಹುದಾದಂತಹ ವಿಷಯಗಳನ್ನು ನಿರ್ದಿಷ್ಟಪಡಿಸಬಹುದು.

(2) ನ್ಯಾಯಾಧಿಕರಣದ ನ್ಯಾಯಪೀಠಕ್ಕೆ ಹಂಚಿಕೆಯಾದ ವ್ಯವಹಾರದ ವ್ಯಾಪ್ತಿಯೊಳಗೆ ಯಾವುದೇ ಒಂದು ವಿಷಯವು ಬರುತ್ತದೆಯೇ ಎಂಬ ಬಗ್ಗೆ ಯಾವುದೇ ಪ್ರಶ್ನೆ ಉದ್ಭವಿಸಿದರೆ, ಆ ಬಗ್ಗೆ ಅಧ್ಯಕ್ಷನ ತೀರ್ಮಾನವು ಅಂತಿಮವಾಗಿರತಕ್ಕದ್ದು.

**ವಿವರಣೆ.**- ಸಂದೇಹಗಳ ನಿವಾರಣೆಗಾಗಿ 'ವಿಷಯಗಳು' ಎಂಬ ಪದವು 19ನೇ ಪ್ರಕರಣದ ಅಡಿಯಲ್ಲಿ ಸಲ್ಲಿಸಿದ ಅರ್ಜಿಗಳನ್ನು ಒಳಗೊಳ್ಳುತ್ತದೆಂದು ಈ ಮೂಲಕ ಘೋಷಿಸಲಾಗಿದೆ.

## ಅಧ್ಯಾಯ - IV

## ಪ್ರಕ್ರಿಯೆ

**19. ನ್ಯಾಯಾಧಿಕರಣಗಳಿಗೆ ಅರ್ಜಿ ಸಲ್ಲಿಸುವುದು.**- (1) ಈ ಅಧಿನಿಯಮದ ಇತರ ಉಪಬಂಧಗಳಿಗೆ ಒಳಪಟ್ಟು, ನ್ಯಾಯಾಧಿಕರಣದ ಅಧಿಕಾರ ವ್ಯಾಪ್ತಿಯೊಳಗೆ ಬರುವ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಹೊರಡಿಸಿದ ಯಾವುದೇ ಆದೇಶದಿಂದ ಬಾಧಿತನಾದ ವ್ಯಕ್ತಿಯು ತನ್ನ ಕುಂದು ಕೊರತೆಗಳ ನಿವಾರಣೆಗಾಗಿ ನ್ಯಾಯಾಧಿಕರಣಕ್ಕೆ ಅರ್ಜಿ ಸಲ್ಲಿಸಬಹುದು.

**ವಿವರಣೆ.**- ಈ ಉಪಪ್ರಕರಣದ ಉದ್ದೇಶಗಳಿಗಾಗಿ, 'ಆದೇಶ' ಎಂದರೆ,-

(ಎ) ಸರ್ಕಾರವು ಅಥವಾ ಭಾರತದ ರಾಜ್ಯ ಕ್ಷೇತ್ರದೊಳಗಿರುವ ಅಥವಾ ಭಾರತ ಸರ್ಕಾರದ ನಿಯಂತ್ರಣದಲ್ಲಿರುವ ಸ್ಥಳೀಯ ಅಥವಾ ಇತರ ಪ್ರಾಧಿಕಾರವು ಅಥವಾ ಸರ್ಕಾರದ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಯಾವುದೇ ನಿಗಮವು ಅಥವಾ ಸೊಸೈಟಿಯು ಮಾಡಿದ ಆದೇಶ; ಅಥವಾ

(ಬಿ) (ಎ) ಖಂಡದಲ್ಲಿ ಉಲ್ಲೇಖಿಸಲಾದ ಸರ್ಕಾರದ ಅಥವಾ ಸ್ಥಳೀಯ ಅಥವಾ ಇತರ ಪ್ರಾಧಿಕಾರದ ಅಥವಾ ನಿಗಮದ ಅಥವಾ ಸೊಸೈಟಿಯ ಅಧಿಕಾರಿಯು, ಸಮಿತಿಯು ಅಥವಾ ಇತರ ನಿಕಾಯವು ಅಥವಾ ಏಜೆನ್ಸಿಯು ಮಾಡಿದ ಆದೇಶ.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಸಲ್ಲಿಸುವ ಪ್ರತಿಯೊಂದು ಅರ್ಜಿಯು ಕೇಂದ್ರ ಸರ್ಕಾರವು ನಿಯಮಿಸಬಹುದಾದಂತಹ ನಮೂನೆಯಲ್ಲಿರತಕ್ಕದ್ದು ಮತ್ತು ಆ ಅರ್ಜಿಯ ಜೊತೆಗೆ ಹಾಗೆ ನಿಯಮಿಸಬಹುದಾದಂತಹ ದಸ್ತಾವೇಜುಗಳು ಅಥವಾ ಇತರ ಸಾಕ್ಷ್ಯವು ಮತ್ತು ಅಂತಹ ಅರ್ಜಿಯನ್ನು ದಾಖಲು ಮಾಡುವ ಸಂಬಂಧದಲ್ಲಿ ಒಂದು ನೂರು ರೂಪಾಯಿಗಳಿಗೆ ಮೀರದ ಫೀಜು ಯಾವುದಾದರೂ ಇದ್ದರೆ ಆ ಫೀಜು ಮತ್ತು ಆದೇಶಿಕೆಗಳ ಜಾರಿಯ ಅಥವಾ ಅಮಲ್ಜಾರಿಗೆ ಸಂಬಂಧಿಸಿದ ಅಂತಹ ಇತರ ಫೀಜು ಇರತಕ್ಕದ್ದು.

(3) (1)ನೇ ಉಪಪ್ರಕರಣದ ಅಡಿಯಲ್ಲಿ ಅರ್ಜಿಯನ್ನು ಸ್ವೀಕರಿಸಿದ ಮೇಲೆ, ನ್ಯಾಯಾಧಿಕರಣವು ಅವಶ್ಯವೆಂದು ಭಾವಿಸುವಂತಹ ವಿಚಾರಣೆಯನ್ನು ನಡೆಸಿದ ತರುವಾಯ, ಆ ಅರ್ಜಿಯು ತನ್ನ ನ್ಯಾಯ ನಿರ್ಣಯಕ್ಕೆ ಅಥವಾ ಅಧಿವಿಚಾರಣೆಗೆ ಸೂಕ್ತವಾಗಿದೆಯೆಂದು ಅದಕ್ಕೆ ಮನದಟ್ಟಾದರೆ ಅಂತಹ ಅರ್ಜಿಯನ್ನು ಅಂಗೀಕರಿಸತಕ್ಕದ್ದು; ಆದರೆ, ನ್ಯಾಯಾಧಿಕರಣಕ್ಕೆ ಹಾಗೆ ಮನದಟ್ಟಾಗದಿದ್ದರೆ ಅದು ಆ ಬಗ್ಗೆ ಕಾರಣಗಳನ್ನು ದಾಖಲು ಮಾಡಿ ಆ ಅರ್ಜಿಯನ್ನು ಕ್ಷಿಪ್ರವಾಗಿ ತಿರಸ್ಕರಿಸಬಹುದು.

(4) (3)ನೇ ಉಪಪ್ರಕರಣದ ಅಡಿಯಲ್ಲಿ ನ್ಯಾಯಾಧಿಕರಣವು ಅರ್ಜಿಯನ್ನು ಅಂಗೀಕರಿಸಿರುವಲ್ಲಿ ಮತ್ತು ಹಾಗೆ ಅಂಗೀಕರಿಸುವುದಕ್ಕೆ ನಿಕಟಪೂರ್ವದಲ್ಲಿ ಇತ್ಯರ್ಥದಲ್ಲಿರುವ ಅಂತಹ ಅರ್ಜಿಯ ವಸ್ತುವಿಷಯಕ್ಕೆ ಸಂಬಂಧಿಸಿದಂತೆ ಕುಂದುಕೊರತೆಗಳ ನಿವಾರಣೆಗೆ ಸಂಬಂಧಪಟ್ಟ ಸೇವಾ ನಿಯಮಗಳ ಮೇರೆಗಿನ ಪ್ರತಿಯೊಂದು ವ್ಯವಹರಣೆಯು ಕೊನೆಗೊಳ್ಳತಕ್ಕದ್ದು ಮತ್ತು ನ್ಯಾಯಾಧಿಕರಣವು ಅನ್ಯಥಾ ನಿರ್ದೇಶಿಸಿರುವುದನ್ನು ಹೊರತುಪಡಿಸಿ, ಅಂತಹ ವಿಷಯದ ಸಂಬಂಧದಲ್ಲಿ ಯಾವುದೇ ಅಪೀಲು ಅಥವಾ ಮನವಿಯನ್ನು ಅಂತಹ ನಿಯಮಗಳ ಮೇರೆಗೆ ಆ ತರುವಾಯ ಸ್ವೀಕರಿಸತಕ್ಕದ್ದಲ್ಲ.

**20. ಇತರ ಪರಿಹಾರೋಪಾಯಗಳನ್ನು ಬಳಸಿ ಮುಗಿಸಿದ್ದ ಹೊರತು ಅರ್ಜಿಗಳನ್ನು ಅಂಗೀಕರಿಸದಿರುವುದು.**- (1) ಕುಂದುಕೊರತೆಗಳ ನಿವಾರಣೆಗಾಗಿ ಸಂಬಂಧಪಟ್ಟ ಸೇವಾ ನಿಯಮಗಳ ಮೇರೆಗೆ ಅರ್ಜಿದಾರನಿಗೆ ಲಭ್ಯವಿರುವ ಎಲ್ಲ ಪರಿಹಾರೋಪಾಯಗಳನ್ನು ಅವನು ಬಳಸಿಕೊಂಡಿದ್ದಾನೆಂದು ನ್ಯಾಯಾಧಿಕರಣಕ್ಕೆ ಮನದಟ್ಟಾದ ಹೊರತು, ಅದು ಸಾಮಾನ್ಯವಾಗಿ ಅರ್ಜಿಯನ್ನು ಅಂಗೀಕರಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಉದ್ದೇಶಗಳಿಗಾಗಿ ಒಬ್ಬ ವ್ಯಕ್ತಿಯು ಕುಂದುಕೊರತೆಗಳ ನಿವಾರಣೆಗಾಗಿ ಸಂಬಂಧಪಟ್ಟ ಸೇವಾ ನಿಯಮಗಳ ಮೇರೆಗೆ ತನಗೆ ಲಭ್ಯವಿರುವ ಎಲ್ಲ ಪರಿಹಾರೋಪಾಯಗಳನ್ನು ಬಳಸಿಕೊಂಡಿದ್ದಾನೆಂದು ಈ ಮುಂದಿನ ಸಂದರ್ಭಗಳಲ್ಲಿ ಭಾವಿಸತಕ್ಕದ್ದು,-

(ಎ) ಕುಂದುಕೊರತೆಗಳ ಸಂಬಂಧದಲ್ಲಿ ಅಂತಹ ವ್ಯಕ್ತಿಯು ಸಲ್ಲಿಸಿದ ಯಾವುದೇ ಅಪೀಲನ್ನು ಅಥವಾ ಮನವಿಯನ್ನು ತಿರಸ್ಕರಿಸಿ ಸರ್ಕಾರವು ಅಥವಾ ಅಂತಹ ನಿಯಮಗಳ ಮೇರೆಗೆ ಅಂತಿಮ ಆದೇಶವನ್ನು ಹೊರಡಿಸಲು ಸಕ್ಷಮವಾದ ಇತರ ಪ್ರಾಧಿಕಾರವು ಅಥವಾ ಅಧಿಕಾರಿಯು ಅಥವಾ ಇತರ ವ್ಯಕ್ತಿಯು ಅಂತಹ ಅಂತಿಮ ಆದೇಶವನ್ನು ಮಾಡಿರುವ ಸಂದರ್ಭ; ಅಥವಾ

(ಬಿ) ಅಂತಹ ವ್ಯಕ್ತಿಯು ಸಲ್ಲಿಸಿದ ಅಪೀಲು ಅಥವಾ ಮನವಿಯ ಸಂಬಂಧದಲ್ಲಿ ಅಂತಹ ಆದೇಶವನ್ನು ಹೊರಡಿಸಲು ಸಕ್ಷಮವಾದ ಸರ್ಕಾರವು ಅಥವಾ ಇತರ ಪ್ರಾಧಿಕಾರವು ಅಥವಾ ಅಧಿಕಾರಿಯು ಅಥವಾ ಇತರ ವ್ಯಕ್ತಿಯು ಯಾವುದೇ ಅಂತಿಮ ಆದೇಶವನ್ನು ಮಾಡದೆ ಇದ್ದು, ಆ ಅಪೀಲನ್ನು ಅಥವಾ ಮನವಿಯನ್ನು ಸಲ್ಲಿಸಿದ ದಿನಾಂಕದಿಂದ ಆರು ತಿಂಗಳ ಅವಧಿಯು ಮುಕ್ತಾಯಗೊಂಡಿರುವ ಸಂದರ್ಭ.

(3) (1) ಮತ್ತು (2)ನೇ ಉಪಪ್ರಕರಣಗಳ ಉದ್ದೇಶಗಳಿಗಾಗಿ, ರಾಷ್ಟ್ರಪತಿಗೆ ಅಥವಾ ರಾಜ್ಯದ ರಾಜ್ಯಪಾಲನಿಗೆ ಅಥವಾ ಯಾವನೇ ಇತರ ಕಾರ್ಯ ನಿರ್ವಾಹಕನಿಗೆ ಮನವಿ ಸಲ್ಲಿಸಲು ಅರ್ಜಿದಾರನಿಗೆ ಲಭ್ಯವಿರುವ ಯಾವುದೇ ಪರಿಹಾರೋಪಾಯವು, ಅರ್ಜಿದಾರನು ಅಂತಹ ಮನವಿಯನ್ನು ಸಲ್ಲಿಸಲು ಇಚ್ಛಿಸಿದ್ದ ಹೊರತು, ಲಭ್ಯವಿರುವ ಪರಿಹಾರೋಪಾಯಗಳಲ್ಲಿ ಒಂದೆಂದು ಭಾವಿಸತಕ್ಕದ್ದಲ್ಲ.

**21. ಕಾಲ ಪರಿಮಿತಿ.**- (1) ಮುಂದಿನ ಸಂದರ್ಭಗಳಲ್ಲಿ ಎಂದರೆ,-

(ಎ) ಕುಂದುಕೊರತೆಗಳಿಗೆ ಸಂಬಂಧಪಟ್ಟಂತೆ 20ನೇ ಪ್ರಕರಣದ (2)ನೇ ಉಪಪ್ರಕರಣದ (ಎ) ಖಂಡದಲ್ಲಿ ನಮೂದಿಸಲಾದಂತಹ ಅಂತಿಮ ಆದೇಶವನ್ನು ಮಾಡಿರುವಾಗ ಅರ್ಜಿಯನ್ನು ಅಂತಹ ಅಂತಿಮ ಆದೇಶವನ್ನು ಮಾಡಿದ ದಿನಾಂಕದಿಂದ ಒಂದು ವರ್ಷದೊಳಗೆ ಸಲ್ಲಿಸದಿರುವಲ್ಲಿ;

(ಬಿ) 20ನೇ ಪ್ರಕರಣದ (2)ನೇ ಉಪಪ್ರಕರಣದ (ಬಿ) ಖಂಡದಲ್ಲಿ ನಮೂದಿಸಲಾದಂತಹ ಅಪೀಲು ಅಥವಾ ಮನವಿಯನ್ನು ಸಲ್ಲಿಸಿರುವಲ್ಲಿ ಮತ್ತು ಹಾಗೆ ಸಲ್ಲಿಸಿದ ತರುವಾಯ ಆರು ತಿಂಗಳ ಅವಧಿಯು ಮುಕ್ತಾಯವಾಗಿದ್ದು, ಸದರಿ ಆರು ತಿಂಗಳ ಅವಧಿಯ ಮುಕ್ತಾಯದ ದಿನಾಂಕದಿಂದ ಒಂದು ವರ್ಷದೊಳಗೆ ಅಂತಹ ಅಂತಿಮ ಆದೇಶವನ್ನು ಮಾಡದಿರುವಲ್ಲಿ

- ನ್ಯಾಯಾಧಿಕರಣವು ಅರ್ಜಿಯನ್ನು ಅಂಗೀಕರಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದಲ್ಲಿ ಏನೇ ಇದ್ದರೂ,-

(ಎ) ಯಾವ ಕುಂದುಕೊರತೆಯ ಸಂಬಂಧದಲ್ಲಿ ಅರ್ಜಿಯನ್ನು ಸಲ್ಲಿಸಲಾಗಿದೆಯೋ ಆ ಕುಂದುಕೊರತೆಗೆ ಸಂಬಂಧಪಡುವ ವಿಷಯದ ಬಗ್ಗೆ ಈ ಅಧಿನಿಯಮದ ಅಡಿಯಲ್ಲಿ ಯಾವ ದಿನಾಂಕದಿಂದ ನ್ಯಾಯಾಧಿಕರಣವು ಅಧಿಕಾರ ವ್ಯಾಪ್ತಿಯನ್ನು, ಅಧಿಕಾರಗಳನ್ನು ಮತ್ತು ಪ್ರಾಧಿಕಾರವನ್ನು ಚಲಾಯಿಸತಕ್ಕದ್ದೋ ಆ ದಿನಾಂಕದ ನಿಕಟಪೂರ್ವದ ಮೂರು ವರ್ಷಗಳ ಅವಧಿಯ ಯಾವುದೇ ಸಮಯದಲ್ಲಿ ಮಾಡಲಾದ ಯಾವುದೇ ಆದೇಶದಿಂದ ಆ ಕುಂದುಕೊರತೆ ಉಂಟಾಗಿದ್ದರೆ;

(ಬಿ) ಅಂತಹ ಕುಂದುಕೊರತೆಯ ನಿವಾರಣೆಗಾಗಿ ಯಾವುದೇ ಉಚ್ಚ ನ್ಯಾಯಾಲಯದಲ್ಲಿ ಸದರಿ ದಿನಾಂಕಕ್ಕೆ ಮುಂಚೆ ಯಾವುವೇ ವ್ಯವಹರಣೆಗಳನ್ನು ಪ್ರಾರಂಭಿಸಿರದಿದ್ದರೆ

- (1)ನೇ ಉಪಪ್ರಕರಣದ (ಎ) ಖಂಡದಲ್ಲಿ ಅಥವಾ ಸಂದರ್ಭಾನುಸಾರ (ಬಿ) ಖಂಡದಲ್ಲಿ ಉಲ್ಲೇಖಿಸಲಾದ ಅವಧಿಯೊಳಗೆ ಅಥವಾ ಸದರಿ ದಿನಾಂಕದಿಂದ ಆರು ತಿಂಗಳುಗಳ ಅವಧಿಯೊಳಗೆ - ಇವುಗಳಲ್ಲಿ ಯಾವ ಅವಧಿಯು ತರುವಾಯ ಮುಕ್ತಾಯವಾಗುವುದೋ ಆ ಅವಧಿಯೊಳಗೆ ಅರ್ಜಿಯನ್ನು ಸಲ್ಲಿಸಿದ್ದರೆ, ನ್ಯಾಯಾಧಿಕರಣವು ಆ ಅರ್ಜಿಯನ್ನು ಅಂಗೀಕರಿಸತಕ್ಕದ್ದು.

(3) (1)ನೇ ಉಪಪ್ರಕರಣದಲ್ಲಿ ಅಥವಾ (2)ನೇ ಉಪಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಅರ್ಜಿದಾರನು, (1)ನೇ ಉಪಪ್ರಕರಣದ (ಎ) ಖಂಡದಲ್ಲಿ ಅಥವಾ (ಬಿ) ಖಂಡದಲ್ಲಿ ನಿರ್ದಿಷ್ಟಪಡಿಸಲಾದ ಒಂದು ವರ್ಷದ ಅವಧಿಯೊಳಗೆ ಅಥವಾ ಸಂದರ್ಭಾನುಸಾರ (2)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಆರು ತಿಂಗಳ ಅವಧಿಯೊಳಗೆ ಅರ್ಜಿಯನ್ನು ಸಲ್ಲಿಸದಿರಲು ತನಗೆ ಸಾಕಷ್ಟು ಕಾರಣಗಳಿದ್ದವೆಂದು ನ್ಯಾಯಾಧಿಕರಣಕ್ಕೆ ಮನವರಿಕೆ ಮಾಡಿಕೊಟ್ಟರೆ, ಅದು ಅಂಥ ಅವಧಿಯ ತರುವಾಯವೂ ಅರ್ಜಿಯನ್ನು ಅಂಗೀಕರಿಸಬಹುದು.

**22. ನ್ಯಾಯಾಧಿಕರಣದ ಕಾರ್ಯವಿಧಾನ ಮತ್ತು ಅಧಿಕಾರಗಳು.**- (1) ನ್ಯಾಯಾಧಿಕರಣವು, ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5) ರಲ್ಲಿ ನಿರೂಪಿಸಲಾದ ಕಾರ್ಯವಿಧಾನಕ್ಕೆ ಬದ್ಧವಾಗತಕ್ಕದ್ದಲ್ಲ. ಆದರೆ, ಸ್ವಾಭಾವಿಕ ನ್ಯಾಯ ತತ್ವಗಳಿಗನುಸಾರ ಕಾರ್ಯ ನಿರ್ವಹಿಸತಕ್ಕದ್ದು ಮತ್ತು ಈ ಅಧಿನಿಯಮದ ಮತ್ತು ಕೇಂದ್ರ ಸರ್ಕಾರವು ರಚಿಸಿದ ಯಾವುವೇ ನಿಯಮಗಳ ಇತರ ಉಪಬಂಧಗಳಿಗೆ ಒಳಪಟ್ಟು, ನ್ಯಾಯಾಧಿಕರಣವು, ಅದರ ವಿಚಾರಣಾ ಸ್ಥಳಗಳನ್ನು ಮತ್ತು ಸಮಯವನ್ನು ನಿಗದಿಪಡಿಸುವುದು ಮತ್ತು ಸಭೆಯನ್ನು ಬಹಿರಂಗವಾಗಿ ನಡೆಸಬೇಕೇ ಅಥವಾ ಖಾಸಗಿಯಾಗಿ ನಡೆಸಬೇಕೇ ಎಂಬ ಬಗ್ಗೆ ತೀರ್ಮಾನಿಸುವುದೂ ಸೇರಿದಂತೆ ತನ್ನದೇ ಆದ ಕಾರ್ಯವಿಧಾನವನ್ನು ಗೊತ್ತುಪಡಿಸುವ ಅಧಿಕಾರವನ್ನು ಹೊಂದಿರತಕ್ಕದ್ದು.

(2) ನ್ಯಾಯಾಧಿಕರಣಕ್ಕೆ ಸಲ್ಲಿಸಿದ ಪ್ರತಿಯೊಂದು ಅರ್ಜಿಯನ್ನು ಸಾಧ್ಯವಾದಷ್ಟು ಬೇಗನೆ ಅದು ತೀರ್ಮಾನಿಸತಕ್ಕದ್ದು ಮತ್ತು ಸಾಮಾನ್ಯವಾಗಿ, ದಸ್ತಾವೇಜುಗಳನ್ನು ಮತ್ತು ಲಿಖಿತ ಮನವಿಗಳನ್ನು ಪರಿಶೀಲಿಸಿದ ಮೇಲೆ ಮತ್ತು ಮಂಡಿಸಬಹುದಾದಂತಹ ಮೌಖಿಕ ವಾದಗಳ ಸುನಾವಣೆಯ ತರುವಾಯ ಪ್ರತಿಯೊಂದು ಅರ್ಜಿಯನ್ನು ತೀರ್ಮಾನಿಸತಕ್ಕದ್ದು.

(3) ನ್ಯಾಯಾಧಿಕರಣವು, ಈ ಅಧಿನಿಯಮದ ಮೇರೆಗೆ ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವ ಉದ್ದೇಶಗಳಿಗಾಗಿ ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರ ಮೇರೆಗೆ ದಾವೆಯ ಅಧಿವಿಚಾರಣೆ ಮಾಡುವಾಗ ಸಿವಿಲ್ ನ್ಯಾಯಾಲಯದಲ್ಲಿ ನಿಹಿತವಾಗಿರುವಂಥ ಅಧಿಕಾರಗಳನ್ನು ಈ ಕೆಳಕಂಡ ವಿಷಯಗಳ ಬಗ್ಗೆ ಹೊಂದಿರತಕ್ಕದ್ದು, ಎಂದರೆ:-

(ಎ) ಯಾರೇ ವ್ಯಕ್ತಿಯನ್ನು ಸಮನು ಮಾಡುವುದು ಮತ್ತು ಅವನ ಹಾಜರಾತಿಯನ್ನು ಒತ್ತಾಯಪಡಿಸುವುದು ಮತ್ತು ಅವನನ್ನು ಪ್ರಮಾಣ ಮಾಡಿಸಿ ಪರೀಕ್ಷಿಸುವುದು;

(ಬಿ) ದಸ್ತಾವೇಜುಗಳನ್ನು ಪತ್ತೆಹಚ್ಚಿ ಅವುಗಳನ್ನು ಹಾಜರುಪಡಿಸುವಂತೆ ಅಗತ್ಯಪಡಿಸುವುದು;

(ಸಿ) ಅಫಿಡಾವಿಟ್‍ಗಳ ಮೇಲೆ ಸಾಕ್ಷ್ಯಗಳನ್ನು ಪಡೆಯುವುದು;

(ಡಿ) ಭಾರತ ಸಾಕ್ಷ್ಯ ಅಧಿನಿಯಮ, 1872 (1872ರ 1)ರ 123 ಮತ್ತು 124ನೇ ಪ್ರಕರಣಗಳ ಉಪಬಂಧಗಳಿಗೆ ಒಳಪಟ್ಟು, ಯಾವುದೇ ಕಛೇರಿಯ ಯಾವುದೇ ಸಾರ್ವಜನಿಕ ದಾಖಲೆಯನ್ನು ಅಥವಾ ದಸ್ತಾವೇಜನ್ನು ಅಥವಾ ಅಂತಹ ದಾಖಲೆಯ ಅಥವಾ ದಸ್ತಾವೇಜಿನ ಪ್ರತಿಯನ್ನು ಕಡ್ಡಾಯವಾಗಿ ಕೋರುವುದು;

(ಇ) ಸಾಕ್ಷಿದಾರರನ್ನು ಅಥವಾ ದಸ್ತಾವೇಜುಗಳನ್ನು ಪರೀಕ್ಷಿಸಲು ಕಮಿಷನ್ನುಗಳನ್ನು ಹೊರಡಿಸುವುದು;

(ಎಫ್) ತನ್ನ ತೀರ್ಮಾನಗಳನ್ನು ಪುನರವಲೋಕಿಸುವುದು;

(ಜಿ) ತಪ್ಪಿದ್ದಕ್ಕಾಗಿ ಮನವಿಯನ್ನು ವಜಾ ಮಾಡುವುದು ಅಥವಾ ಅದನ್ನು ಏಕಪಕ್ಷೀಯವಾಗಿ ತೀರ್ಮಾನಿಸುವುದು;

(ಎಚ್) ತಪ್ಪಿದ್ದಕ್ಕಾಗಿ ಯಾವುದೇ ಮನವಿಯನ್ನು ವಜಾ ಮಾಡಿದ ಯಾವುದೇ ಆದೇಶವನ್ನು ಅಥವಾ ಏಕಪಕ್ಷೀಯವಾಗಿ ಅದು ಹೊರಡಿಸಿದ ಯಾವುದೇ ಆದೇಶವನ್ನು ತಳ್ಳಿಹಾಕುವುದು; ಮತ್ತು

(ಐ) ಕೇಂದ್ರ ಸರ್ಕಾರವು ನಿಯಮಿಸಬಹುದಾದಂತಹ ಯಾವುದೇ ಇತರ ವಿಷಯ.

**23. ಕಾನೂನು ವೃತ್ತಿ ನಿರತರ ನೆರವು ಪಡೆಯಲು ಅರ್ಜಿದಾರನ ಹಕ್ಕು ಮತ್ತು ಪ್ರಸ್ತುತಪಡಿಸುವ ಅಧಿಕಾರಿಗಳನ್ನು ನೇಮಕ ಮಾಡಲು ಸರ್ಕಾರ ಮುಂತಾದವುಗಳ ಹಕ್ಕು.**- (1) ಈ ಅಧಿನಿಯಮದ ಮೇರೆಗೆ, ನ್ಯಾಯಾಧಿಕರಣಕ್ಕೆ ಅರ್ಜಿಯನ್ನು ಸಲ್ಲಿಸುವ ವ್ಯಕ್ತಿಯು, ನ್ಯಾಯಾಧಿಕರಣದ ಮುಂದೆ ತನ್ನ ಪ್ರಕರಣವನ್ನು ಪ್ರಸ್ತುತಪಡಿಸಲು ಖುದ್ದಾಗಿ ಹಾಜರಾಗಬಹುದು ಅಥವಾ ತನ್ನ ಇಚ್ಛಾನುಸಾರ ಕಾನೂನು ವೃತ್ತಿನಿರತರ ನೆರವನ್ನು ತೆಗೆದುಕೊಳ್ಳಬಹುದು.

(2) ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ಅಥವಾ 14ನೇ ಪ್ರಕರಣದ (3)ನೇ ಉಪಪ್ರಕರಣದ ಅಥವಾ 15ನೇ ಪ್ರಕರಣದ (3)ನೇ ಉಪಪ್ರಕರಣದ ಉಪಬಂಧಗಳು ಅನ್ವಯವಾಗುವ ಸ್ಥಳೀಯ ಅಥವಾ ಇತರ ಪ್ರಾಧಿಕಾರವು ಅಥವಾ ನಿಗಮವು ಅಥವಾ ಸೊಸೈಟಿಯು ಪ್ರಸ್ತುತಪಡಿಸುವ ಅಧಿಕಾರಿಗಳಾಗಿ ಕಾರ್ಯನಿರ್ವಹಿಸಲು ಒಬ್ಬ ಅಥವಾ ಹೆಚ್ಚು ಕಾನೂನು ವೃತ್ತಿನಿರತರನ್ನು ಅಥವಾ ತನ್ನ ಅಧಿಕಾರಿಗಳ ಪೈಕಿ ಯಾರನ್ನಾದರೂ ಅಧಿಕೃತಗೊಳಿಸಬಹುದು ಮತ್ತು ಅದು ಹಾಗೆ ಅಧಿಕೃತಗೊಳಿಸಿದ ಪ್ರತಿಯೊಬ್ಬ ವ್ಯಕ್ತಿಯು, ನ್ಯಾಯಾಧಿಕರಣದ ಮುಂದೆ ಯಾವುದೇ ಅರ್ಜಿಗೆ ಸಂಬಂಧಿಸಿದಂತೆ ಅದರ ಪ್ರಕರಣವನ್ನು ಪ್ರಸ್ತುತಪಡಿಸುವ ಕಾರ್ಯ ನಿರ್ವಹಿಸಬಹುದು.

**24. ಮಧ್ಯಕಾಲೀನ ಆದೇಶಗಳನ್ನು ಮಾಡುವ ಸಂಬಂಧದಲ್ಲಿ ಷರತ್ತುಗಳು.–** ಈ ಅಧಿನಿಯಮದ ಯಾವುವೇ ಇತರ ಉಪಬಂಧಗಳಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಇದ್ದರೂ, ಅರ್ಜಿಯ ಮೇಲೆ ಅಥವಾ ಅರ್ಜಿಗೆ ಸಂಬಂಧಪಟ್ಟ ಯಾವುದೇ ವ್ಯವಹರಣೆಗಳ ಮೇಲೆ,–

(ಎ) ಅಂತಹ ಅರ್ಜಿಯ ಮತ್ತು ಅಂತಹ ಮಧ್ಯಕಾಲೀನ ಆದೇಶದ ವಾದವನ್ನು ಸಮರ್ಥಿಸುವ ಎಲ್ಲ ದಸ್ತಾವೇಜುಗಳ ಪ್ರತಿಗಳನ್ನು, ಯಾವ ಪಕ್ಷಕಾರನ ವಿರುದ್ಧ ಅಂತಹ ಅರ್ಜಿಯನ್ನು ಸಲ್ಲಿಸಲಾಗಿದೆಯೋ ಅಥವಾ ಸಲ್ಲಿಸಲು ಉದ್ದೇಶಿಸಲಾಗಿದೆಯೋ ಆ ಪಕ್ಷಕಾರನಿಗೆ ಒದಗಿಸಿದ್ದ ಹೊರತು; ಮತ್ತು

(ಬಿ) ಆ ವಿಷಯ ಕುರಿತು ಅಹವಾಲು ಹೇಳಿಕೊಳ್ಳಲು ಅಂತಹ ಪಕ್ಷಕಾರನಿಗೆ ಅವಕಾಶ ಕೊಟ್ಟಿದ್ದ ಹೊರತು

– ನಿರ್ಬಂಧಕಾಜ್ಞೆಯ ರೂಪದಲ್ಲಾಗಲಿ ಅಥವಾ ತಡೆಯಾಜ್ಞೆಯ ರೂಪದಲ್ಲಾಗಲಿ ಅಥವಾ ಯಾವುದೇ ಇತರ ರೀತಿಯಲ್ಲಾಗಲಿ ಯಾವುದೇ ಮಧ್ಯಕಾಲೀನ ಆದೇಶವನ್ನು ಮಾಡತಕ್ಕದ್ದಲ್ಲ:

ಪರಂತು, ಅರ್ಜಿದಾರನಿಗೆ ಆಗುವಂತಹ ಮತ್ತು ಹಣದ ರೂಪದಲ್ಲಿ ಸಾಕಷ್ಟು ಪರಿಹಾರ ನೀಡಲು ಸಾಧ್ಯವಾಗದಂತಹ ಯಾವುದೇ ನಷ್ಟವನ್ನು ತಪ್ಪಿಸುವುದಕ್ಕಾಗಿ ವಿಶೇಷ ಕ್ರಮವೆಂದು ಮಧ್ಯಕಾಲೀನ ಆದೇಶವನ್ನು ಮಾಡುವುದು ಅವಶ್ಯವೆಂದು ನ್ಯಾಯಾಧಿಕರಣಕ್ಕೆ ಮನದಟ್ಟಾದರೆ, ಅದು ಕಾರಣಗಳನ್ನು ದಾಖಲು ಮಾಡಿ (ಎ) ಮತ್ತು (ಬಿ) ಉಪಖಂಡಗಳ ಅಗತ್ಯತೆಗಳನ್ನು ಪೂರೈಸುವ ಸಂಬಂಧದಲ್ಲಿ ವಿನಾಯಿತಿ ನೀಡಬಹುದು ಮತ್ತು ಅಂಥ ಮಧ್ಯಕಾಲೀನ ಆದೇಶವನ್ನು ಮಾಡಬಹುದು. ಆದರೆ, ಯಾವುದೇ ಅಂತಹ ಮಧ್ಯಕಾಲೀನ ಆದೇಶವನ್ನು ಬೇಗನೆ ರದ್ದು ಮಾಡದಿದ್ದಲ್ಲಿ, ಅದನ್ನು ಮಾಡಿದ ದಿನಾಂಕದಿಂದ ಹದಿನಾಲ್ಕು ದಿವಸಗಳ ಅವಧಿಯು ಮುಕ್ತಾಯವಾಗುವ ಮೊದಲು ಸದರಿ ಅಗತ್ಯತೆಗಳನ್ನು ಪೂರೈಸಿದ ಹೊರತು, ಆ ಅವಧಿಯು ಮುಗಿದ ಮೇಲೆ ಅದು ಪರಿಣಾಮಕಾರಿಯಾಗಿರುವುದು ನಿಂತುಹೋಗತಕ್ಕದ್ದು.

**25. ಒಂದು ನ್ಯಾಯಪೀಠದಿಂದ ಇನ್ನೊಂದು ನ್ಯಾಯಪೀಠಕ್ಕೆ ಪ್ರಕರಣಗಳನ್ನು ವರ್ಗಾಯಿಸಲು ಅಧ್ಯಕ್ಷನ ಅಧಿಕಾರ.–** ಪಕ್ಷಕಾರರ ಪೈಕಿ ಯಾರಾದರೂ ಅರ್ಜಿಯನ್ನು ಸಲ್ಲಿಸಿದ ಮೇಲೆ ಮತ್ತು ಪಕ್ಷಕಾರರಿಗೆ ನೋಟೀಸು ಕೊಟ್ಟ ತರುವಾಯ ಮತ್ತು ಅಧ್ಯಕ್ಷನು ಪಕ್ಷಕಾರನ ಪೈಕಿ ಸುನಾವಣೆ ಮಾಡಬೇಕೆಂದು ಇಚ್ಛಿಸಬಹುದಾದಂಥವರನ್ನು ಸುನಾವಣೆ ಮಾಡಿದ ತರುವಾಯ ಅಥವಾ ಹಾಗೆ ನೋಟೀಸು ಕೊಡದೆ ಸ್ವಇಚ್ಛೆಯಿಂದ ಅಧ್ಯಕ್ಷನು ಒಂದು ನ್ಯಾಯಪೀಠದ ಮುಂದೆ ಇತ್ಯರ್ಥದಲ್ಲಿರುವ ಯಾವುದೇ ಪ್ರಕರಣವನ್ನು ವಿಲೆಗಾಗಿ ಯಾವುದೇ ಇತರ ನ್ಯಾಯಪೀಠಕ್ಕೆ ವರ್ಗಾಯಿಸಬಹುದು.

**26. ಬಹುಮತದ ಮೂಲಕ ತೀರ್ಮಾನ ಕೈಗೊಳ್ಳುವುದು.–** ಯಾವುದೇ ವಿಷಯದ ಬಗ್ಗೆ ನ್ಯಾಯಪೀಠದ ಸದಸ್ಯರಲ್ಲಿ ಭಿನ್ನಾಭಿಪ್ರಾಯ ಉಂಟಾದರೆ ಮತ್ತು ಆ ಬಗ್ಗೆ ಬಹುಮತವಿದ್ದರೆ, ಬಹುಮತದ ಅಭಿಪ್ರಾಯಕ್ಕನುಸಾರ ಆ ವಿಷಯವನ್ನು ತೀರ್ಮಾನಿಸತಕ್ಕದ್ದು. ಆದರೆ, ಭಿನ್ನಾಭಿಪ್ರಾಯಪಡುವ ಸದಸ್ಯರು ಸಮ ಸಂಖ್ಯೆಯಲ್ಲಿದ್ದರೆ, ಅವರು ಭಿನ್ನಾಭಿಪ್ರಾಯ ಪಡುವ ಅಂಶ ಅಥವಾ ಅಂಶಗಳನ್ನು ನಿರೂಪಿಸತಕ್ಕದ್ದು ಮತ್ತು ಆ ಕುರಿತು ಅಧ್ಯಕ್ಷನಿಗೆ ತಿಳಿಸತಕ್ಕದ್ದು ಮತ್ತು ಅಧ್ಯಕ್ಷನು ಆ ಅಂಶ ಅಥವಾ ಅಂಶಗಳನ್ನು ಖುದ್ದಾಗಿ ಸುನಾವಣೆ ಮಾಡತಕ್ಕದ್ದು ಅಥವಾ ನ್ಯಾಯಾಧಿಕರಣದ ಸದಸ್ಯರ ಪೈಕಿ ಒಬ್ಬನು ಅಥವಾ ಹೆಚ್ಚು ಸದಸ್ಯರು ಅಂತಹ ಅಂಶ ಅಥವಾ ಅಂಶಗಳನ್ನು ಸುನಾವಣೆ ಮಾಡುವಂತೆ ಕೋರಿ ಆ ಪ್ರಕರಣವನ್ನು ಅವರಿಗೆ ಒಪ್ಪಿಸತಕ್ಕದ್ದು ಮತ್ತು ತದನುಸಾರ ಆ ಪ್ರಕರಣವನ್ನು ಸುನಾವಣೆ ಮಾಡುವ ಮತ್ತು ಈ ಮುಂಚೆ ಸುನಾವಣೆ ಮಾಡಿದ ನ್ಯಾಯಾಧಿಕರಣದ ಸದಸ್ಯರ ಬಹುಮತದ ಅಭಿಪ್ರಾಯಕ್ಕನುಸಾರ ಅಂತಹ ಅಂಶ ಅಥವಾ ಅಂಶಗಳನ್ನು ತೀರ್ಮಾನಿಸತಕ್ಕದ್ದು.

**27. ನ್ಯಾಯಾಧಿಕರಣದ ಆದೇಶಗಳ ಅಮಲ್ಜಾರಿ.–** ಅರ್ಜಿಯನ್ನು ಅಥವಾ ಅಪೀಲನ್ನು ಅಂತಿಮವಾಗಿ ವಿಲೆ ಮಾಡುವ ನ್ಯಾಯಾಧಿಕರಣದ ಆದೇಶವು ಈ ಅಧಿನಿಯಮದ ಮತ್ತು ನಿಯಮಗಳ ಇತರ ಉಪಬಂಧಗಳಿಗೆ ಒಳಪಟ್ಟು ಅಂತಿಮವಾಗಿರತಕ್ಕದ್ದು ಮತ್ತು ಆ ಆದೇಶವನ್ನು ಉಚ್ಚ ನ್ಯಾಯಾಲಯವೂ ಸೇರಿದಂತೆ ಯಾವುದೇ ಇತರ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕದ್ದಲ್ಲ ಮತ್ತು ಅಂತಹ ಆದೇಶವನ್ನು, ಅರ್ಜಿಗೆ ಸಂಬಂಧಪಟ್ಟ ಕುಂದುಕೊರತೆಗಳ ಸಂಬಂಧದಲ್ಲಿ 20ನೇ ಪ್ರಕರಣದ (2)ನೇ ಉಪಪ್ರಕರಣದ (ಎ) ಖಂಡದಲ್ಲಿ ಉಲ್ಲೇಖಿಸಿದ ಸ್ವರೂಪದ ಯಾವುದೇ

ಅಂತಿಮ ಆದೇಶವನ್ನು (ಅಂತಹ ಅಂತಿಮ ಆದೇಶವನ್ನು ವಾಸ್ತವವಾಗಿ ಮಾಡಿರಲಿ ಅಥವಾ ಇಲ್ಲದಿರಲಿ) ಅಮಲ್ಜಾರಿಗೊಳಿಸಬಹುದಾಗಿತ್ತೋ ಅದೇ ರೀತಿಯಲ್ಲಿ ಅಮಲ್ಜಾರಿಗೊಳಿಸತಕ್ಕದ್ದು.

## ಅಧ್ಯಾಯ – V

### ಸಂಕೀರ್ಣ

**28. ಸರ್ವೋಚ್ಚ ನ್ಯಾಯಾಲಯವನ್ನು ಉಳಿದು ಇತರ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಯನ್ನು ಹೊರತುಪಡಿಸುವುದು.**– ಯಾವುದೇ ಸೇವೆ ಅಥವಾ ಹುದ್ದೆಗೆ ಮಾಡಲಾಗುವ ನೌಕರಿಭರ್ತಿ ಅಥವಾ ಆ ನೌಕರಿಭರ್ತಿಗೆ ಸಂಬಂಧಪಡುವ ವಿಷಯಗಳ ಅಥವಾ ಯಾವುದೇ ಸೇವೆಯ ಸದಸ್ಯರಿಗೆ ಅಥವಾ ಯಾವುದೇ ಸೇವೆಗೆ ಅಥವಾ ಹುದ್ದೆಗೆ ನೇಮಕಗೊಂಡ ವ್ಯಕ್ತಿಗಳಿಗೆ ಸಂಬಂಧಪಡುವ ಸೇವಾ ವಿಷಯಗಳ ಸಂಬಂಧದಲ್ಲಿ, ಈ ಅಧಿನಿಯಮದ ಮೇರೆಗೆ ನ್ಯಾಯಾಧಿಕರಣವು ಯಾವುದೇ ಅಧಿಕಾರ ವ್ಯಾಪ್ತಿಯನ್ನು, ಅಧಿಕಾರವನ್ನು ಮತ್ತು ಪ್ರಾಧಿಕಾರವನ್ನು ಯಾವ ದಿನಾಂಕದಂದು ಮತ್ತು ಯಾವ ದಿನಾಂಕದಿಂದ ಚಲಾಯಿಸತಕ್ಕುದೋ ಆ ದಿನಾಂಕದಂದು ಮತ್ತು ಆ ದಿನಾಂಕದಿಂದ,–

(ಎ) ಸರ್ವೋಚ್ಚ ನ್ಯಾಯಾಲಯವನ್ನು ಹೊರತುಪಡಿಸಿ; ಅಥವಾ

(ಬಿ) ಕೈಗಾರಿಕಾ ವಿವಾದಗಳ ಅಧಿನಿಯಮ, 1947 (1947ರ 14)ರ ಮೇರೆಗೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಸಂವಾದಿ ಕಾನೂನಿನ ಮೇರೆಗೆ ರಚಿತವಾದ ಯಾವುದೇ ಕೈಗಾರಿಕಾ ನ್ಯಾಯಾಧಿಕರಣವನ್ನು, ಕಾರ್ಮಿಕ ನ್ಯಾಯಾಲಯವನ್ನು ಅಥವಾ ಇತರ ಪ್ರಾಧಿಕಾರವನ್ನು ಹೊರತುಪಡಿಸಿ

– ಯಾವುದೇ ನ್ಯಾಯಾಲಯವು ಅಂತಹ ನೌಕರಿಭರ್ತಿಗೆ ಅಥವಾ ಅಂತಹ ನೌಕರಿಭರ್ತಿಗೆ ಸಂಬಂಧಪಡುವ ವಿಷಯಗಳ ಅಥವಾ ಅಂತಹ ಸೇವಾ ವಿಷಯಗಳ ಸಂಬಂಧದಲ್ಲಿ ಚಲಾಯಿಸತಕ್ಕ ಯಾವುದೇ ಅಧಿಕಾರ ವ್ಯಾಪ್ತಿಯನ್ನು, ಅಧಿಕಾರಗಳನ್ನು ಅಥವಾ ಪ್ರಾಧಿಕಾರವನ್ನು ಹೊಂದಿರತಕ್ಕದ್ದಲ್ಲ ಅಥವಾ ಅವುಗಳನ್ನು ಚಲಾಯಿಸಲು ಹಕ್ಕನ್ನು ಹೊಂದಿರತಕ್ಕದ್ದಲ್ಲ.

**29. ಇತ್ಯರ್ಥದಲ್ಲಿರುವ ಪ್ರಕರಣಗಳ ವರ್ಗಾವಣೆ.**– ಈ ಅಧಿನಿಯಮದ ಅಡಿಯಲ್ಲಿ ನ್ಯಾಯಾಧಿಕರಣವನ್ನು ಸ್ಥಾಪಿಸಿದ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಯಾವುದೇ ನ್ಯಾಯಾಲಯದ ಅಥವಾ ಇತರ ಪ್ರಾಧಿಕಾರದ ಮುಂದೆ ಯಾವ ದಾವೆ ಅಥವಾ ಇತರ ವ್ಯವಹರಣೆಯು ಇತ್ಯರ್ಥದಲ್ಲಿದೆಯೋ ಆ ದಾವೆ ಅಥವಾ ವ್ಯವಹರಣೆಗೆ ಆಧಾರವಾಗಿರುವ ವ್ಯಾಜ್ಯ ಕಾರಣವು ನ್ಯಾಯಾಧಿಕರಣದ ಅಂತಹ ಸ್ಥಾಪನೆಯ ತರುವಾಯ ಉದ್ಭವಿಸಿದ್ದರೆ ಮತ್ತು ಅಂತಹ ನ್ಯಾಯಾಧಿಕರಣದ ಅಧಿಕಾರ ವ್ಯಾಪ್ತಿಯೊಳಗೆ ಬರಬಹುದಾದಂಥ ವ್ಯಾಜ್ಯ ಕಾರಣವಾಗಿದ್ದರೆ, ಆ ಪ್ರತಿಯೊಂದು ದಾವೆಯು ಅಥವಾ ವ್ಯವಹರಣೆಯು ಅಂತಹ ನ್ಯಾಯಾಧಿಕರಣಕ್ಕೆ ಆ ದಿನಾಂಕದಂದು ವರ್ಗಾವಣೆಯಾಗಿರತಕ್ಕದ್ದು:

ಪರಂತು, ಈ ಹಿಂದೆ ಹೇಳಿದಂತೆ ಉಚ್ಚ ನ್ಯಾಯಾಲಯದ ಮುಂದೆ ಇತ್ಯರ್ಥದಲ್ಲಿರುವ ಯಾವುದೇ ಅಪೀಲಿಗೆ ಈ ಉಪಪ್ರಕರಣದಲ್ಲಿರುವುದು ಯಾವುದೂ ಅನ್ವಯವಾಗತಕ್ಕದ್ದಲ್ಲ.

(2) ಯಾವುದೇ ಸ್ಥಳೀಯ ಪ್ರಾಧಿಕಾರದ ಅಥವಾ ಇತರ ಪ್ರಾಧಿಕಾರದ ಅಥವಾ ನಿಗಮದ ಅಥವಾ ಸೊಸೈಟಿಯ ಸಂಬಂಧದಲ್ಲಿ ನ್ಯಾಯಾಧಿಕರಣಕ್ಕೆ ಅಧಿಕಾರ ವ್ಯಾಪ್ತಿಯನ್ನು ಯಾವ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ ಪ್ರದಾನ ಮಾಡಲಾಯಿತೋ ಆ ದಿನಾಂಕಕ್ಕೆ ನಿಕಟಪೂರ್ವದಲ್ಲಿ ನ್ಯಾಯಾಲಯದ ಅಥವಾ ಇತರ ಪ್ರಾಧಿಕಾರದ ಮುಂದೆ ಇತ್ಯರ್ಥದಲ್ಲಿರುವ ದಾವೆಗೆ ಅಥವಾ ಇತರ ವ್ಯವಹರಣೆಗೆ ಆಧಾರವಾಗಿರುವ ವ್ಯಾಜ್ಯ ಕಾರಣವು ಸದರಿ ದಿನಾಂಕದ ತರುವಾಯ ಉದ್ಭವಿಸಿದ್ದರೆ ಮತ್ತು ಅಂತಹ ನ್ಯಾಯಾಧಿಕರಣದ ಅಧಿಕಾರ ವ್ಯಾಪ್ತಿಯೊಳಗೆ ಬರಬಹುದಾಗಿದ್ದ ವ್ಯಾಜ್ಯ ಕಾರಣವಾಗಿದ್ದರೆ, ಆ ಪ್ರತಿಯೊಂದು ದಾವೆಯು ಅಥವಾ ವ್ಯವಹರಣೆಯು ಆ ದಿನಾಂಕದಂದು ಅಂತಹ ನ್ಯಾಯಾಧಿಕರಣಕ್ಕೆ ವರ್ಗಾವಣೆಯಾಗತಕ್ಕದ್ದು:

ಪರಂತು, ಈ ಹಿಂದೆ ಹೇಳಿದಂತೆ ಉಚ್ಚ ನ್ಯಾಯಾಲಯದಲ್ಲಿ ಇತ್ಯರ್ಥದಲ್ಲಿರುವ ಯಾವುದೇ ಅಪೀಲಿಗೆ ಈ ಪ್ರಕರಣದಲ್ಲಿರುವುದು ಯಾವುದೂ ಅನ್ವಯವಾಗತಕ್ಕದ್ದಲ್ಲ.

**ವಿವರಣೆ.**– ಈ ಉಪಪ್ರಕರಣದ ಉದ್ದೇಶಗಳಿಗಾಗಿ ಯಾವುದೇ ಸ್ಥಳೀಯ ಪ್ರಾಧಿಕಾರದ ಅಥವಾ ಇತರ ಪ್ರಾಧಿಕಾರದ ಅಥವಾ ನಿಗಮದ ಅಥವಾ ಸೊಸೈಟಿಯ ಸಂಬಂಧದಲ್ಲಿ, "ಯಾವ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ ನ್ಯಾಯಾಧಿಕರಣಕ್ಕೆ ಅಧಿಕಾರ ವ್ಯಾಪ್ತಿಯನ್ನು ಪ್ರದಾನ ಮಾಡಲಾಯಿತೋ ಆ ದಿನಾಂಕ" ಎಂದರೆ, ಯಾವ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ 14ನೇ ಪ್ರಕರಣದ (3)ನೇ ಉಪಪ್ರಕರಣದ ಅಥವಾ

ಸಂದರ್ಭಾನುಸಾರ 15ನೇ ಪ್ರಕರಣದ (3)ನೇ ಉಪಪ್ರಕರಣದ ಉಪಬಂಧಗಳನ್ನು ಅಂತಹ ಸ್ಥಳೀಯ ಪ್ರಾಧಿಕಾರಕ್ಕೆ ಅಥವಾ ಇತರ ಪ್ರಾಧಿಕಾರಕ್ಕೆ ಅಥವಾ ನಿಗಮಕ್ಕೆ ಅಥವಾ ಸೊಸೈಟಿಗೆ ಅನ್ವಯಿಸಲಾಗುವುದೋ ಆ ದಿನಾಂಕ.

(3) ಯಾವ ರಾಜ್ಯಗಳಿಗಾಗಿ ಜಂಟಿ ಆಡಳಿತ ನ್ಯಾಯಾಧಿಕರಣವನ್ನು ಸ್ಥಾಪಿಸಲಾಗಿದೆಯೋ ಆ ರಾಜ್ಯಗಳ ಪೈಕಿ ಯಾವುದೇ ಒಂದು ರಾಜ್ಯವು ಅಥವಾ ಹೆಚ್ಚಿನ ರಾಜ್ಯಗಳು ಅಂಥ ಸ್ಥಾಪನೆಯ ನಿಕಟಪೂರ್ವದಲ್ಲಿ ರಾಜ್ಯ ನ್ಯಾಯಾಧಿಕರಣವನ್ನು ಅಥವಾ ರಾಜ್ಯ ನ್ಯಾಯಾಧಿಕರಣಗಳನ್ನು ಹೊಂದಿದ್ದರೆ, ಸದರಿ ದಿನಾಂಕದ ನಿಕಟಪೂರ್ವದಲ್ಲಿ, ಅಂತಹ ರಾಜ್ಯ ನ್ಯಾಯಾಧಿಕರಣದ ಅಥವಾ ರಾಜ್ಯ ನ್ಯಾಯಾಧಿಕರಣಗಳ ಮುಂದೆ ಇತ್ಯರ್ಥದಲ್ಲಿರುವ ಎಲ್ಲ ಪ್ರಕರಣಗಳನ್ನು ಅವುಗಳ ದಾಖಲೆಗಳ ಸಹಿತ, ಆ ದಿನಾಂಕದಂದು ಅಂತಹ ಜಂಟಿ ಆಡಳಿತ ನ್ಯಾಯಾಧಿಕರಣಕ್ಕೆ ವರ್ಗಾವಣೆಯಾಗತಕ್ಕದ್ದು.

**ವಿವರಣೆ.**- ಈ ಉಪಪ್ರಕರಣದ ಉದ್ದೇಶಗಳಿಗಾಗಿ "ರಾಜ್ಯ ನ್ಯಾಯಾಧಿಕರಣ" ಎಂದರೆ, 4ನೇ ಪ್ರಕರಣದ (2)ನೇ ಉಪಪ್ರಕರಣದ ಅಡಿಯಲ್ಲಿ ಸ್ಥಾಪಿಸಲಾದ ನ್ಯಾಯಾಧಿಕರಣ.

(4) (1)ನೇ ಉಪಪ್ರಕರಣದ ಅಥವಾ (2)ನೇ ಉಪಪ್ರಕರಣದ ಅಡಿಯಲ್ಲಿ ಯಾವುದೇ ನ್ಯಾಯಾಲಯದಿಂದ ಅಥವಾ ಇತರ ಪ್ರಾಧಿಕಾರದಿಂದ ನ್ಯಾಯಾಧಿಕರಣಕ್ಕೆ ಯಾವುದೇ ದಾವೆ, ಅಪೀಲು ಅಥವಾ ಇತರ ವ್ಯವಹರಣೆಯು ವರ್ಗಾವಣೆಯಾಗಿರುವಲ್ಲಿ,-

(ಎ) ನ್ಯಾಯಾಲಯವು ಅಥವಾ ಇತರ ಪ್ರಾಧಿಕಾರವು ಅಂತಹ ವರ್ಗಾವಣೆಯ ತರುವಾಯ, ಆದಷ್ಟುಬೇಗನೆ, ಅಂತಹ ದಾವೆಯ, ಅಪೀಲಿನ ಅಥವಾ ಇತರ ವ್ಯವಹರಣೆಯ ದಾಖಲೆಗಳನ್ನು ಆ ನ್ಯಾಯಾಧಿಕರಣಕ್ಕೆ ಕಳುಹಿಸತಕ್ಕದ್ದು; ಮತ್ತು

(ಬಿ) ನ್ಯಾಯಾಧಿಕರಣವು, ಅಂತಹ ದಾಖಲೆಗಳನ್ನು ಸ್ವೀಕರಿಸಿದ ಮೇಲೆ, ಅಂತಹ ದಾವೆಯು, ಅಪೀಲಿನ ಅಥವಾ ಇತರ ವ್ಯವಹರಣೆಯ ಬಗ್ಗೆ ಸಾಧ್ಯವಾಗಬಹುದಾದಷ್ಟು ಮಟ್ಟಿಗೆ 19ನೇ ಪ್ರಕರಣದ ಅಡಿಯಲ್ಲಿ ಅರ್ಜಿಯ ಸಂಬಂಧದಲ್ಲಿ ಕ್ರಮ ಕೈಗೊಳ್ಳುವಂತಹುದೇ ರೀತಿಯಲ್ಲಿ ನ್ಯಾಯಧಿಕರಣವು ತಾನು ಸೂಕ್ತವೆಂದು ಭಾವಿಸಬಹುದಾದಂತೆ ಅಂತಹ ವರ್ಗಾವಣೆಗೆ ಮೊದಲು ಆ ದಾವೆ, ಅಪೀಲು ಅಥವಾ ವ್ಯವಹರಣೆಯು ತಲುಪಿದ್ದ ಹಂತದಿಂದ ಅಥವಾ ಯಾವುದೇ ಇನ್ನೂ ಮುಂಚಿನ ಹಂತದಿಂದ ಅಥವಾ ಹೊಸದಾಗಿ ಕ್ರಮ ಜರುಗಿಸಬಹುದು.

(5) (3)ನೇ ಉಪಪ್ರಕರಣದ ಅಡಿಯಲ್ಲಿ ಯಾವುದೇ ಪ್ರಕರಣವು ಜಂಟಿ ಆಡಳಿತ ನ್ಯಾಯಾಧಿಕರಣಕ್ಕೆ ವರ್ಗಾವಣೆಯಾಗಿರುವಲ್ಲಿ, ಜಂಟಿ ಆಡಳಿತ ನ್ಯಾಯಾಧಿಕರಣವು ಅಂತಹ ಪ್ರಕರಣವು ವರ್ಗಾವಣೆಯಾಗುವುದಕ್ಕೆ ಮೊದಲು ಅದು ತಲುಪಿದ್ದ ಹಂತದಿಂದ ಕ್ರಮ ಜರುಗಿಸಬಹುದು.

(6) ಆಡಳಿತ ನ್ಯಾಯಾಧಿಕರಣಗಳ (ತಿದ್ದುಪಡಿ) ಅಧಿನಿಯಮ, 1987ರ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ನ್ಯಾಯಾಧಿಕರಣದ ಮುಂದೆ ಇತ್ಯರ್ಥದಲ್ಲಿದ್ದ ಪ್ರಕರಣಕ್ಕೆ ಆಧಾರವಾಗಿರುವ ವ್ಯಾಜ್ಯ ಕಾರಣವು ಅಂತಹ ಪ್ರಾರಂಭದ ತರುವಾಯ ಉದ್ಭವಿಸಿದ್ದರೆ, ಮತ್ತು ಯಾವುದೇ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯೊಳಗೆ ಬರಬಹುದಾಗಿದ್ದ ವ್ಯಾಜ್ಯ ಕಾರಣವಾಗಿದ್ದರೆ ಆ ಪ್ರತಿಯೊಂದು ಪ್ರಕರಣವು ಅದರ ದಾಖಲೆಗಳ ಸಹಿತ ಅಂತಹ ಪ್ರಾರಂಭದಂದು ಅಂತಹ ನ್ಯಾಯಾಲಯಕ್ಕೆ ವರ್ಗಾವಣೆಯಾಗಿರತಕ್ಕದ್ದು.

(7) (6)ನೇ ಉಪಪ್ರಕರಣದ ಅಡಿಯಲ್ಲಿ ನ್ಯಾಯಾಲಯಕ್ಕೆ ಯಾವುದೇ ಪ್ರಕರಣವು ವರ್ಗಾವಣೆಯಾಗಿರುವಲ್ಲಿ ಆ ನ್ಯಾಯಾಲಯವು, ಅಂತಹ ಪ್ರಕರಣವು ಹಾಗೆ ವರ್ಗಾವಣೆಯಾಗುವುದಕ್ಕೆ ಮೊದಲು ಅದು ತಲುಪಿದ್ದ ಹಂತದಿಂದ ಆ ಸಂಬಂಧದಲ್ಲಿ ವ್ಯವಹರಿಸಲು ಮುಂದುವರಿಯಬಹುದು.

**29ಎ. ಕೆಲವು ಅಪೀಲುಗಳನ್ನು ದಾಖಲ್ಮಾಡಲು ಉಪಬಂಧ.**- ನ್ಯಾಯಾಧಿಕರಣವು ಸ್ಥಾಪಿತವಾಗುವುದಕ್ಕೆ ಮೊದಲು ಯಾವುದೇ ದಾವೆ ಅಥವಾ ವ್ಯವಹರಣೆಯಲ್ಲಿ ಉಚ್ಚ ನ್ಯಾಯಾಲಯದ ಹೊರತು ಯಾವುದೇ ನ್ಯಾಯಾಲಯವು ಯಾವುದೇ ಡಿಕ್ರಿ ಅಥವಾ ಆದೇಶವನ್ನು ಮಾಡಿರುವಲ್ಲಿ ಅಥವಾ ಹೊರಡಿಸಿರುವಲ್ಲಿ ಮತ್ತು ಆ ದಾವೆಗೆ ಅಥವಾ ವ್ಯವಹರಣೆಗೆ ಆಧಾರವಾಗಿರುವ ವ್ಯಾಜ್ಯ ಕಾರಣವು ಅಂಥ ಸ್ಥಾಪನೆಯ ತರುವಾಯ ಉದ್ಭವಿಸಿದ್ದರೆ ಅಂತಹ ನ್ಯಾಯಾಧಿಕರಣದ ಅಧಿಕಾರ ವ್ಯಾಪ್ತಿಯಲ್ಲಿ ಬರಬಹುದಾಗಿದ್ದಂಥ ವ್ಯಾಜ್ಯ ಕಾರಣವಾಗಿದ್ದರೆ ಮತ್ತು ಅಂತಹ ಸ್ಥಾಪನೆಗೆ ಮೊದಲು ಅಂತಹ ಡಿಕ್ರಿಯ ಅಥವಾ ಆದೇಶದ ವಿರುದ್ಧ ಯಾವುದೇ ಅಪೀಲನ್ನು ಸಲ್ಲಿಸಿರದಿದ್ದರೆ ಮತ್ತು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಅಂತಹ ಅಪೀಲನ್ನು ಸಲ್ಲಿಸುವ ಕಾಲವು ಅಂತಹ ಸ್ಥಾಪನೆಗೆ ಮೊದಲು ಮುಕ್ತಾಯವಾಗಿಲ್ಲದಿದ್ದರೆ, ಅಂತಹ ಅಪೀಲನ್ನು,-

(ಎ) ಆಡಳಿತ ನ್ಯಾಯಾಧಿಕರಣಗಳ (ತಿದ್ದುಪಡಿ) ವಿಧೇಯಕ, 1986 – ಇದು ರಾಷ್ಟ್ರಪತಿಯ ಅನುಮೋದನೆ ಪಡೆದ ದಿನಾಂಕದಿಂದ ತೊಂಬತ್ತು ದಿವಸಗಳೊಳಗೆ ಅಥವಾ ಅಂತಹ ಡಿಕ್ರಿಯ ಅಥವಾ ಆದೇಶದ ಪ್ರತಿಯನ್ನು ಸ್ವೀಕರಿಸಿದ ದಿನಾಂಕದಿಂದ ತೊಂಬತ್ತು ದಿವಸಗಳೊಳಗೆ ಇವೆರಡರಲ್ಲಿ ಯಾವುದು ತರುವಾಯ ಸಂಭವಿಸುವುದೋ ಆ ಅವಧಿಯೊಳಗೆ ಕೇಂದ್ರೀಯ ಆಡಳಿತ ನ್ಯಾಯಾಧಿಕರಣಕ್ಕೆ, ಅಥವಾ

(ಬಿ) ಯಾವುದೇ ಇತರ ನ್ಯಾಯಾಧಿಕರಣದ ಸ್ಥಾಪನೆಯ ದಿನಾಂಕದಿಂದ ತೊಂಬತ್ತು ದಿವಸಗಳೊಳಗೆ ಅಥವಾ ಅಂತಹ ಡಿಕ್ರಿಯ ಅಥವಾ ಆದೇಶದ ಪ್ರತಿಯನ್ನು ಸ್ವೀಕರಿಸಿದ ದಿನಾಂಕದಿಂದ ತೊಂಬತ್ತು ದಿವಸಗಳೊಳಗೆ – ಇವುಗಳಲ್ಲಿ ಯಾವುದು ತರುವಾಯ ಸಂಭವಿಸುವುದೋ ಆ ಅವಧಿಯೊಳಗೆ ಆ ಯಾವುದೇ ಇತರ ನ್ಯಾಯಾಧಿಕರಣಕ್ಕೆ

– ಸಲ್ಲಿಸಲು ಅವಕಾಶವಿರತಕ್ಕದ್ದು.

**30. ನ್ಯಾಯಾಧಿಕರಣದ ಮುಂದೆ ಇರುವ ವ್ಯವಹರಣೆಗಳು ನ್ಯಾಯಿಕ ವ್ಯವಹರಣೆಗಳಾಗಿರುವುದು.**– ನ್ಯಾಯಾಧಿಕರಣದ ಮುಂದೆ ಇರುವ ಎಲ್ಲ ವ್ಯವಹರಣೆಗಳು ಭಾರತ ದಂಡ ಸಂಹಿತೆಯ (1860ರ 45) 193ನೆಯ, 219ನೆಯ ಮತ್ತು 228ನೆಯ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ನ್ಯಾಯಿಕ ವ್ಯವಹರಣೆಗಳಾಗಿರುವುವೆಂದು ಭಾವಿಸತಕ್ಕದ್ದು.

**31. ನ್ಯಾಯಾಧಿಕರಣದ ಸದಸ್ಯರು ಮತ್ತು ಸಿಬ್ಬಂದಿ ವರ್ಗವು ಲೋಕನೌಕರರಾಗಿರುವುದು.**– ನ್ಯಾಯಾಧಿಕರಣದ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಇತರ ಸದಸ್ಯರು ಮತ್ತು 13ನೇ ಪ್ರಕರಣದ ಮೇರೆಗೆ ಅದಕ್ಕೆ ಒದಗಿಸಲಾದ ಅಧಿಕಾರಿಗಳು ಮತ್ತು ಇತರ ನೌಕರರು ಭಾರತೀಯ ದಂಡ ಸಂಹಿತೆಯ (1860ರ 45) 21ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಲೋಕನೌಕರರೆಂದು ಭಾವಿಸತಕ್ಕದ್ದು.

**32. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.**– ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮ ಅಥವಾ ಆದೇಶಕ್ಕನುಸಾರವಾಗಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯದ ಬಗ್ಗೆ ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ವಿರುದ್ಧ ಅಥವಾ ಯಾವುದೇ ಕೇಂದ್ರ ಅಥವಾ ಜಂಟಿ ಅಥವಾ ರಾಜ್ಯ ಆಡಳಿತ ನ್ಯಾಯಾಧಿಕರಣದ ಅಧ್ಯಕ್ಷನ, ಉಪಾಧ್ಯಕ್ಷನ ಅಥವಾ ಇತರ ಸದಸ್ಯನ ಅಥವಾ ಅಂತಹ ಅಧ್ಯಕ್ಷನು, ಉಪಾಧ್ಯಕ್ಷನು ಅಥವಾ ಇತರ ಸದಸ್ಯನು ಅಧಿಕೃತಗೊಳಿಸಿದ ಯಾರೇ ಇತರ ವ್ಯಕ್ತಿಯ ವಿರುದ್ಧ ಯಾವುದೇ ದಾವೆಯನ್ನು, ಪ್ರಾಸಿಕ್ಯೂಷನನ್ನು ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

**33. ಈ ಅಧಿನಿಯಮವು ಅಧ್ಯಾರೋಹಿ ಪರಿಣಾಮ ಹೊಂದಿರುವುದು.**– ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಅಥವಾ ಈ ಅಧಿನಿಯಮವನ್ನು ಹೊರತುಪಡಿಸಿ ಯಾವುದೇ ಇತರ ಕಾನೂನಿನ ಕಾರಣದಿಂದಾಗಿ ಪರಿಣಾಮಕಾರಿಯಾಗಿರುವ ಯಾವುದೇ ಲಿಖಿತದಲ್ಲಿ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾದುದು ಏನೇ ಇದ್ದರೂ, ಆ ಉಪಬಂಧಗಳು ಪರಿಣಾಮಕಾರಿಯಾಗಿರತಕ್ಕದ್ದು.

**34. ತೊಂದರೆಗಳನ್ನು ನಿವಾರಿಸುವ ಅಧಿಕಾರ.**– (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆಯು ಉದ್ಭವಿಸಿದರೆ, ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಆದೇಶವನ್ನು ಪ್ರಕಟಿಸುವ ಮೂಲಕ ಆ ತೊಂದರೆಯನ್ನು ನಿವಾರಿಸಲು ಅವಶ್ಯಕವೆಂದು ಅಥವಾ ವಿಹಿತವೆಂದು ತನಗೆ ಕಂಡುಬರುವಂಥ ಮತ್ತು ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಲ್ಲದಂಥ ಉಪಬಂಧಗಳನ್ನು ರಚಿಸಬಹುದು.

(2) ಈ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ಆದೇಶವನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ ಅದನ್ನು ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇರಿಸತಕ್ಕದ್ದು.

**35. ನಿಯಮಗಳನ್ನು ರಚಿಸಲು ಕೇಂದ್ರ ಸರ್ಕಾರದ ಅಧಿಕಾರ.**– (1) ಕೇಂದ್ರ ಸರ್ಕಾರವು, 36ನೇ ಪ್ರಕರಣದ ಉಪಬಂಧಗೊಳಪಟ್ಟು, ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸಲು ನಿಯಮಗಳನ್ನು ರಚಿಸಬಹುದು.

(2) ಹಿಂದೆ ಹೇಳಿದ ಅಧಿಕಾರಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂತಹ ನಿಯಮಗಳು ಈ ಕೆಳಕಂಡ ಎಲ್ಲ ವಿಷಯಗಳ ಅಥವಾ ಯಾವುವೇ ವಿಷಯದ ಬಗ್ಗೆ ಉಪಬಂಧಿಸಬಹುದು ಎಂದರೆ:–

(ಎ) 5ನೇ ಪ್ರಕರಣದ (4)ನೇ ಉಪಪ್ರಕರಣದ (ಡಿ) ಖಂಡದ ಮೇರೆಗೆ ಇಬ್ಬರಿಗಿಂತ ಹೆಚ್ಚು ಸದಸ್ಯರನ್ನೊಳಗೊಂಡ ನ್ಯಾಯಪೀಠವು ನಿರ್ಧರಿಸತಕ್ಕ ಪ್ರಕರಣ ಅಥವಾ ಪ್ರಕರಣಗಳು;

(ಬಿ) ಅಧ್ಯಕ್ಷನ, ಉಪಾಧ್ಯಕ್ಷನ ಅಥವಾ ಇತರ ಸದಸ್ಯನ ದುರ್ನಡತೆಯ ಅಥವಾ ಅಸಮರ್ಥತೆಯ ಬಗ್ಗೆ ತನಿಖೆ ನಡೆಸುವ ಸಲುವಾಗಿ 9ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗಿನ ಕಾರ್ಯವಿಧಾನ;

(ಸಿ) ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಇತರ ಸದಸ್ಯರಿಗೆ ಸಂದಾಯ ಮಾಡಬೇಕಾದ ಸಂಬಳ ಮತ್ತು ಭತ್ಯಗಳು ಮತ್ತು ಅವರ ಇತರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು;

(ಡಿ) 19ನೇ ಪ್ರಕರಣದ ಮೇರೆಗೆ ಅರ್ಜಿಯನ್ನು ಸಲ್ಲಿಸತಕ್ಕ ನಮೂನೆ, ಅಂತಹ ಅರ್ಜಿಗೆ ಲಗತ್ತಿಸಬೇಕಾದ ದಸ್ತಾವೇಜುಗಳು ಮತ್ತು ಇತರ ಸಾಕ್ಷ್ಯಗಳು ಮತ್ತು ಅಂತಹ ಅರ್ಜಿಯನ್ನು ದಾಖಲು ಮಾಡುವ ಬಗ್ಗೆ ಅಥವಾ ಆದೇಶಿಕೆಗಳ ಜಾರಿಯ ಅಥವಾ ಅಮಲ್ಜಾರಿಯ ಬಗ್ಗೆ ಸಂದಾಯ ಮಾಡಬೇಕಾದ ಫೀಜು;

(ಇ) 22ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ನ್ಯಾಯಾಧಿಕರಣವು ಯಾವ ನಿಯಮಗಳಿಗೆ ಒಳಪಟ್ಟು ತನ್ನ ಕಾರ್ಯವಿಧಾನವನ್ನು ವಿನಿಯಮಿಸುವ ಅಧಿಕಾರವನ್ನು ಹೊಂದಿರತಕ್ಕುದೋ ಆ ನಿಯಮಗಳು ಮತ್ತು ಆ ಪ್ರಕರಣದ (3)ನೇ ಉಪಪ್ರಕರಣದ (ಐ) ಖಂಡದ ಮೇರೆಗೆ ಯಾವ ಹೆಚ್ಚಿನ ವಿಷಯಗಳ ಬಗ್ಗೆ ನ್ಯಾಯಾಧಿಕರಣವು ಸಿವಿಲ್ ನ್ಯಾಯಾಲಯದ ಅಧಿಕಾರಗಳನ್ನು ಚಲಾಯಿಸಬಹುದೋ ಆ ಹೆಚ್ಚಿನ ವಿಷಯಗಳು; ಮತ್ತು

(ಎಫ್) ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ಯಾವುದೇ ಇತರ ವಿಷಯ ಅಥವಾ ಯಾವ ವಿಷಯದ ಸಂಬಂಧದಲ್ಲಿ ಕೇಂದ್ರ ಸರ್ಕಾರವು ನಿಯಮವನ್ನು ರಚಿಸುವುದು ಅಗತ್ಯವಾಗಿದೆಯೋ ಆ ಯಾವುದೇ ಇತರ ವಿಷಯ.

**36. ನಿಯಮಗಳನ್ನು ರಚಿಸಲು ಸಮುಚಿತ ಸರ್ಕಾರದ ಅಧಿಕಾರ.**- ಸಮುಚಿತ ಸರ್ಕಾರವು ಅಧಿಸೂಚನೆಯ ಮೂಲಕ ಈ ಕೆಳಕಂಡ ಎಲ್ಲಾ ವಿಷಯಗಳ ಬಗ್ಗೆ ಅಥವಾ ಯಾವುವೇ ವಿಷಯದ ಬಗ್ಗೆ ಉಪಬಂಧ ಕಲ್ಪಿಸಲು ನಿಯಮಗಳನ್ನು ರಚಿಸಬಹುದು, ಎಂದರೆ:-

(ಎ) 12ನೇ ಪ್ರಕರಣದ ಮೇರೆಗೆ ನ್ಯಾಯಾಧಿಕರಣದ ಅಧ್ಯಕ್ಷನು, ನ್ಯಾಯಾಧಿಕರಣದ ನ್ಯಾಯಪೀಠಗಳ ಮೇಲೆ ಚಲಾಯಿಸಬಹುದಾದ ಆರ್ಥಿಕ ಮತ್ತು ಆಡಳಿತ ಅಧಿಕಾರಗಳು;

(ಬಿ) 13ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ನ್ಯಾಯಾಧಿಕರಣದ ಅಧಿಕಾರಿಗಳ ಮತ್ತು ಇತರ ನೌಕರರ ಸಂಬಳಗಳು ಮತ್ತು ಭತ್ಯಗಳು ಮತ್ತು ಅವರ ಸೇವಾ ಷರತ್ತುಗಳು; ಮತ್ತು

(ಸಿ) 35ನೇ ಪ್ರಕರಣದಲ್ಲಿ ಯಾವ ವಿಷಯವನ್ನು ನಿರ್ದಿಷ್ಟಪಡಿಸಿಲ್ಲವೋ ಮತ್ತು ಆ ಯಾವ ವಿಷಯದ ಬಗ್ಗೆ ಸಮುಚಿತ ಸರ್ಕಾರವು ನಿಯಮಗಳನ್ನು ರಚಿಸುವುದು ಅಗತ್ಯವಾಗಿರುವುದೋ ಆ ಯಾವುದೇ ಇತರ ವಿಷಯ.

**36ಎ. ಪೂರ್ವಾನ್ವಯವಾಗಿ ನಿಯಮಗಳನ್ನು ರಚಿಸಲು ಅಧಿಕಾರ.**- 35ನೇ ಪ್ರಕರಣದ (2)ನೇ ಉಪಪ್ರಕರಣದ (ಸಿ) ಖಂಡದ ಅಥವಾ 36ನೇ ಪ್ರಕರಣದ (ಬಿ) ಖಂಡದ ಮೇರೆಗೆ ನಿಯಮಗಳನ್ನು ರಚಿಸುವ ಅಧಿಕಾರದಲ್ಲಿ, ಈ ಅಧಿನಿಯಮವು ರಾಷ್ಟ್ರಪತಿಯ ಅನುಮತಿ ಪಡೆದ ದಿನಾಂಕಕ್ಕಿಂತ ಮುಂಚಿನದಲ್ಲದ ದಿನಾಂಕದಿಂದ ಪೂರ್ವಾನ್ವಯವಾಗಿ ಅಂತಹ ನಿಯಮಗಳನ್ನು ಅಥವಾ ಅವುಗಳಲ್ಲಿ ಯಾವುದೇ ನಿಯಮವನ್ನು ರಚಿಸುವ ಅಧಿಕಾರವು ಒಳಗೊಂಡಿರತಕ್ಕದ್ದು. ಆದರೆ, ಅಂಥ ನಿಯಮವು ಯಾವ ವ್ಯಕ್ತಿಗೆ ಅನ್ವಯವಾಗುವುದೋ ಆ ವ್ಯಕ್ತಿಯ ಹಿತಾಸಕ್ತಿಗೆ ಪ್ರತಿಕೂಲ ಪರಿಣಾಮವನ್ನುಂಟು ಮಾಡುವ ಹಾಗೆ ಯಾವುದೇ ಅಂಥ ನಿಯಮವನ್ನು ಪೂರ್ವಾನ್ವಯವಾಗಿ ಜಾರಿಗೊಳಿಸತಕ್ಕದ್ದಲ್ಲ.

**37. ನಿಯಮಗಳನ್ನು ಸದನದ ಮುಂದೆ ಇರಿಸುವುದು.**- (1) ಕೇಂದ್ರ ಸರ್ಕಾರವು ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ನಿರಂತರವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನದ ಅಥವಾ ನಿರಂತರ ಅಧಿವೇಶನಗಳ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಾತಿಯು ಆ ನಿಯಮದ ಮೇರೆಗೆ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

(2) ಈ ಅಧಿನಿಯಮದ ಮೇರೆಗೆ ರಾಜ್ಯ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ರಾಜ್ಯ ವಿಧಾನಮಂಡಲದ ಮುಂದೆ ಇಡತಕ್ಕದ್ದು.